(ಶ್ರೀ ಪಿ. ಜಿ. ಸಿದ್ಧಾಂತಿ) 4 P.M.

ನನಗೊಂದೂ ಗೊತ್ತಾಗುವುದಿಲ್ಲ. ಅಲ್ಲದೆ, ಅಧ್ಯಕ್ಷರಾದ ತಾವೂ ಕೂಡ ನಮ್ಮ ಕಡೆಗಳಲ್ಲಿರುವ ಪರಿಸ್ಥಿತಿಯನ್ನು ನೋಡಿಕೊಂಡು ಬಂದು ಹೇಳಿಕೆಗಳನ್ನು ಕೊಟ್ಟಿದ್ದೀರಿ. ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಅಂತಹ ಹೇಳಿಕೆಗಳನ್ನು ನಾನು ಓದಿ ನೋಡಿದ್ದೇನೆ. ಇಂತಹ ಕ್ಷಾಮ ಪ್ರದೇಶಗಳಲ್ಲಿ ಏನಾದರೂ ಕೆಲಸಗಳನ್ನು ತೆಗೆದುಕೊಳ್ಳಬೇಕು. ನಾನು ಬಿಜಾಪುರದ ಜಿಲ್ಲೆಯ ಕಡೆಯಿಂದ ಬಂದವನು. ನಮ್ಮಲ್ಲಿ ಎರಡು ತಾಲ್ಲೂಕುಗಳು ಉಳಿದು, ಉಳಿದ ಒಂಬತ್ತು ತಾಲ್ಲೂಕುಗಳು ಕ್ಷಾಮದ ಪರಿಸ್ಥಿತಿಗೆ ಒಳಗಾಗಿವೆ. ಈ ಒಂಬತ್ತು ತಾಲ್ಲೂಕುಗಳಲ್ಲಿ ಸುಮಾರು 900 ಹಳ್ಳಿಗಳಿವೆ, 5,000 ಚದುರ ಮೈಲಿಗಳಷ್ಟು ವಿಸ್ತೀರ್ಣವಿದೆ ಮತ್ತು ಹನ್ನೊಂದೂವರೆ ಲಕ್ಷ ಜನಸಂಖ್ಯೆ ಇದೆ ಇಷ್ಟೊಂದು ಜನಸಂಖ್ಯೆಗೆ ಅನುಕೂಲವಾಗುವಂತಹ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಹೇಗಾದರೂ ಮಾಡಬೇಕು ಮತ್ತು ಯಾವ ಕೆಲಸವನ್ನಾದರೂ ಕೈಗೊಳ್ಳಬೇಕೆಂದು ನಾನು ಇಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅಲ್ಲಿ ಜನರಿಗೆ ಕುಡಿಯುವುದಕ್ಕೆ ನೀರು ಬೇಕು. ಈ ರೀತಿಯಾಗಿ ಕುಡಿಯುವ ನೀರು ದೊರಕುವಂತೆ ಮಾಡುವುದು ಮೊದಲನೆಯ ವಿಚಾರ. ನೀರನ್ನು ಹೊರಗಿನಿಂದಲಾದರೂ ತನ್ನಿ ಅಥವಾ ಬೇರಾವ ಮಾರ್ಗದಿಂದಲಾದರೂ ತನ್ನಿ, ಹೇಗಾದರೂ ಈ ಏರ್ಪಾಡನ್ನು ಸರಕಾರದವರು ಮಾಡಬೇಕು.

ಎರಡನೆಯದು, ಈ ಕ್ಷಾಮದ ಪರಿಸ್ಥಿತಿಯಿಂದಾಗಿ ದನಕರುಗಳಿಗೆ ಮೇವು ಸಿಕ್ಕುತ್ತಿಲ್ಲ. ಇದಕ್ಕಾಗಿ ಸರಕಾರದವರ ಎಲ್ಲಿಂದಲಾದರೂ ಮೇವನ್ನು ತರಿಸಿಕೊಡುವುದು ಅವರ ಆದ್ಯ ಕರ್ತವ್ಯ. ಈ ಮೇವಿನ ಜೋಳದ ಬೆಳೆಯನ್ನು ಬೆಳೆಯುವುದಕ್ಕೆ ಇಲ್ಲಿ ಅವಕಾಶ ಏದೆ. ನಮ್ಮ ಕಡೆಗಳಲ್ಲಿ ಕೃಷ್ಣಾ ಮತ್ತು ಭೀಮಾ ನದಿಗಳು ಹರಿಯುತ್ತವೆ. ಈ ನದಿಗಳ ದಂಡೆಯ ಮೇಲೆ ನೀವು ಪಂಪುಗಳನ್ನಾದರೂ ಹಾಕಿಸಿ, ನೀರನ್ನು ಕೊಟ್ಟು ಮೇವನ್ನು ಬೆಳೆಸಿದರೆ ಬಹಳ ಅನುಕೂಲವಾಗುತ್ತದೆ. ಇದು ಬಹಳ ಮುಖ್ಯವಾದ ಕರ್ತವ್ಯ. ಸರಕಾರದವರು ಮುಖ್ಯವಾಗಿ ಕೆಲವು ನೀರಾವರಿ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಬೇಕು. ನಮ್ಮಲ್ಲಿ ಏಳು ನೀರಾವರಿ ಯೋಜನೆಗಳಿವೆ. ಎಂದರೆ ಬಳೂತಿ, ಸೊನ್ನೆ, ರೊಳ್ಳಿ, ಶಿವಯೋಗಮಂದಿರ, ಟಾಗಲಕೋಟೆ ಮುಂತಾದ ಕೆಲವು ಯೋಜನೆಗಳಿವೆ. ಇವನ್ನೆಲ್ಲಾ ಮಾಡಬೇಕೆಂದು ಸರಕಾರ ಪ್ರತಿ ವರ್ಷವೂ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಇದೇನೋ ಸರಿಯೇ. ಆದರೆ ನದ್ಯಕ್ಕೆ ಇದಕ್ಕೋಸ್ಕರ ನೀರನ್ನು ಕೊಟ್ಟು ಮೇವನ್ನು ಬೆಳೆಯಿಸಿ ನಮ್ಮ ಜನಗಳಿಗೆ ಮುಂದಾಗಿ ಕೊಟ್ಟರೆ ಅನುಕೂಲವಾಗುತ್ತದೆ.

ಎರಡನೆಯದು ನಮ್ಮಲ್ಲಿ ಕೆಲವು ಕಡೆಗಳಲ್ಲಿ ರಸ್ತೆಗಳಿಲ್ಲದೆ ವಾಹನ ಸೌಕರ್ಯಕ್ಕೆ ತೊಂದರೆಯಾಗಿದೆ. ಉದಾಹರಣೆಯಾಗಿ ಧಾರವಾಡ ಜಿಲ್ಲೆಯ ಕೆಲವು ಭಾಗ, ಗುಲ್ಬರ್ಗಾ ಜಿಲ್ಲೆಯ ಕೆಲವು ಭಾಗ, ಬೀದರ್ ಜಿಲ್ಲೆಯ ಕೆಲವು ಭಾಗ ಮತ್ತು ಬಿಜಾಪುರಕ್ಕೆ ಸೇರಿದ ಕೆಲವು ಭಾಗ, ಇಲ್ಲಿ ರಸ್ತೆಗಳನ್ನು ಮಾಡಿಸುವುದು ಮುಖ್ಯ ಕರ್ತವ್ಯ. ನಾನು ಹಿಂದೆ ಅರಣ್ಯದಿಂದ ಮೇಯುವ ಹುಲ್ಲನ್ನು ತಂದು ಒದಗಿಸಿಕೊಡಬೇಕೆಂದು ಹೇಳಿದ್ದೆ. ಆದರೆ ಈಗ ಕಾಮಗಾರಿಗಳು ಅತಿ ಮುಖ್ಯವಾದುವು. ಆದುದರಿಂದ ಅರಣ್ಯದಿಂದ ಈಗ ಹುಲ್ಲನ್ನು ತಂದರೆ ಇಲ್ಲಿಯ ಜನರಿಗೆ ಉಪಯೋಗವಾಗುವುದಿಲ್ಲ. ಹನು, ದನ, ಮತ್ತು ಎತ್ತುಗಳು ಇವನ್ನು ಅಭಿವೃದ್ಧಿಗೆ ತರಬೇಕು. ಇವು ಹೊಲ ಉಳುವುದಕ್ಕೆ ಮತ್ತು ಇತರ ಕೆಲಸಗಳಿಗೆ ಬೇಕಾಗುವುದರಿಂದ ಇವುಗಳನ್ನು ರಕ್ಷಣೆ ಮಾಡುವುದು ನಮ್ಮ ಆದ್ಯ ಕರ್ತವ್ಯ. ಆ ದೃಷ್ಟಿಯಿಂದ ಮೇವಿನ ಸಲುವಾಗಿ ತಕ್ಕಾವಿ ಸಾಲ ಕೊಡಿರಿ, ಆಮೇಲೆ ವಾಹನ ಸೌಕರ್ಯ ಮಾಡಿರಿ ಮತ್ತು ಸಬ್ಸಿಡಿಯನ್ನು ಕೊಡಿರಿ. ಎಲ್ಲೆಲ್ಲಿ scarcity ಇದೆಯೋ ಆ ಜಿಲ್ಲೆಗಳಲ್ಲೆಲ್ಲ ಮೇವಿನ ಪೂರೈಕೆ ಮಾಡಿಕೊಡಬೇಕು.

ಎಲ್ಲೆಲ್ಲ ದನಗಳ ಮಾರ್ಕೆಟ್ ಇದೆ, ಎಲ್ಲ ದನಗಳನ್ನು ತಂದು ಮಾರಾಟ ಮಾಡುತ್ತಾರೆ ಅದರ ವಿಚಾರ ಸರ್ಕಾರದ ಗಮನಕ್ಕೆ ತರುತ್ತೇನೆ. ಈ ಸ್ಥಳಗಳಲ್ಲಿ ಹಿಂಡಿ ಮತ್ತು ಹತ್ತಿಕಾಳು ದನಗಳ ಸಲುವಾಗಿ ಬರುತ್ತಿದ್ದುವು. ಅದೇ ರೀತಿಯಲ್ಲಿ ಈಗಲೂ ಹಿಂಡಿ ಮತ್ತು ಹತ್ತಿಕಾಳು ಇವು ಅಲ್ಲಿ ಬರುವಂತೆ ಪ್ರಯತ್ನ ಮಾಡಿರಿ. ದನಗಳ ಸಲುವಾಗಿ ಸರ್ಕಾರದವರು ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇಷ್ಟಾದ ಬಳಿಕ ಮನುಷ್ಯನಿಗೆ ಯಾವ ಕೆಲಸವನ್ನು ಕೊಡುತ್ತೀರಿ? ಅವರಿಗೆ ಹೊಟ್ಟೆಗೇ ಇಲ್ಲ. ಏನಾದರೂ ಕೆಲಸವನ್ನು ಕೊಡಲೇಬೇಕಾಗಿದೆ. ಕೆಲಸ ಕೊಡುವಾಗ ನಮ್ಮ ಊರಿನ ಹತ್ತಿರ ರಸ್ತೆ ಹಾಕಿರಿ, ಮತ್ತೊಂದು ಊರಿನ ಹತ್ತಿರ ರಸ್ತೆ ಹಾಕಿರಿ ಎಂದು ಕೇಳುತ್ತಾರೆ. ಇದರಲ್ಲಿ ಕೆರೆಯ ಕೆಲಸ ಮತ್ತು ಹಳ್ಳಗಳಿಗೆ ಒಡ್ಡು ಹಾಕುವುದು. ಇಂಥ ಕೆಲಸಗಳಿಗೆ ಪ್ರಾಮುಖ್ಯತೆಯನ್ನು ಕೊಡಿ. ನವ್ಮ ಕಡೆ ಬರ ಬರುತ್ತದೆ, ಅರ ಬರ ಬರುತ್ತದೆ ಎಂದು Famine Relief Code ಪ್ರಕಾರ ಮೊದಲೇ ಎಲ್ಲ ತಯಾರಾಗಿಡಬೇಕೆನ್ನುವುದು ಇತ್ತು. ಇಲ್ಲಿ ಬಂದು ನೋಡಿದರೆ ಈ ಸಂಬಂಧದಲ್ಲಿ ಪೂರ್ವ ತಯಾರಿ ಏನೇನೂ ಇಲ್ಲ. ಈ ವರ್ಷ ಬರ ಬರುತ್ತದೆಂದು ಪೂರ್ವ ತಯಾರಿ ಇಲ್ಲ. ಲೋಕೋಪಯೋಗಿ ಖಾತೆಯವರು ಶೇಕಡ ಮೂರು ಕನಿಷ್ಠ ರಿಟರ್ನ್ ಇದ್ದರೆ feasible ಎಂದು ಕೆಲಸ ತೆಗೆದುಕೊಳ್ಳುತ್ತಿದ್ದರು. ಈಗ ಬರಗಾಲ ಅಥವಾ ಅಭಾವ ಪರಿಸ್ಥಿತಿ ಇರುವ ಕಡೆ ಇದನ್ನು ಶೇಕಡ ಒಂದಕ್ಕೆ ಇಳಿಸಿದ್ದಾರೆ. ಈ ಕಾರಣದಿಂದ ನಮ್ಮಲ್ಲಿ ಎಷ್ಟೋ ಕೆರೆಗಳು ಆಗಲು ಶಕ್ಯವಿದೆ. ಅಸಿಸ್ಟೆಂಟ್ ಇಂಜಿನಿಯರ್ ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್ ಇವರುಗಳನ್ನು ಕರೆದುಕೊಂಡು ಹೋಗಿ ನನ್ನ ಕ್ಷೇತ್ರದಲ್ಲಿ ಒಂಬತ್ತು, ಹತ್ತು ಸ್ಥಳಗಳನ್ನು ತೋರಿಸಿಕೊಂಡು ಬಂದೆ. ಕೆಲವು feasible ಇರುವುವು ಎಂದು ಹೇಳಿದರು. ನಾನು ಈ ವಿಚಾರದಲ್ಲಿ ಪತ್ರ ಬರೆದು ಯಾವುದು ಸರಿಯಾಗಿ ಅವುಗಳಿಗೆ ಪ್ಲಾನ್, ಎಸ್ಟಿಮೇಟ್ ಮುಂತಾದುವನ್ನು ತಯಾರು ಮಾಡಿಕೊಡಬೇಕೆಂದು ತಿಳಿಸಿದರೂ ಇನ್ನೂ ಮಾಡಿಲ್ಲ. ಕಾರಣ ನಮ್ಮಲ್ಲಿ ಸಿಬ್ಬಂದಿ ಇಲ್ಲ ಎಂದು ಹೇಳುತ್ತಾರೆ. ಮುದ್ದೆಬಿಹಾಳ ತಾಲ್ಲೂಕ್ ಹೊಕ್ಕಾಣಿ ಎಂಬ ಸ್ಥಳದಲ್ಲಿ ಕೆರೆಯ ಕೆಲಸವನ್ನು ಪುರು ಮಾಡಿಲ್ಲ, ಆ ಕೆಲಸ ಇಲ್ಲಿಯವರೆಗೂ ಆಗಿಲ್ಲ. ಸಂಬಂಧಪಟ್ಟ ಕಾಗದಗಳು ಮೇಲಿನಿಂದ ಕೆಳಕ್ಕೆ ಮತ್ತು ಕೆಳಗಿನಿಂದ ಮೇಲಕ್ಕೆ ಹೋಗುತ್ತಿವೆ. ಈ ರೀತಿಯಿಂದ ಕೆಲಸ ಕಾರ್ಯಗಳು ನಿಧಾನವಾಗುತ್ತಿವೆ. ಹೀಗಾದರೆ ಹೇಗೆ? ಕ್ಷಾಮ ಹೋದ ಮೇಲೆ ಕೆಲಸಗಳನ್ನು ಮಾಡಿಸಿದರೆ ಏನು ಪ್ರಯೋಜನ? ಆದಕಾರಣ ಲೋಕೋಪಯೋಗಿ ಖಾತೆಯ ಮಂತ್ರಿಗಳು ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಸಾಕಷ್ಟು ಸೌಕರ ಸಿಬ್ಬಂದಿ ಇಲ್ಲದೆ ಇದ್ದರೆ, ಹೊರಗಿನಿಂದ ಸಿಬ್ಬಂದಿ

ಯನ್ನು ತೆಗೆದುಕೊಂಡು ಬಂದು, ಕೆಲಸಗಳನ್ನು ಮಾಡಿಸಬೇಕು, Excuse ಹೇಳಬಾರದು ಎಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಬಂಡ್‌ಗಳನ್ನು ಹಾಕುವ ವಿಚಾರ. ಈ ಕೆಲಸಕ್ಕೆ ನಮ್ಮ ಸರ್ಕಾರ ಒಂದು ಪೈ ಕೂಡ ಖರ್ಚು ಮಾಡುವುದಿಲ್ಲ. ಹೇಗೆಂದರೆ ಒಟ್ಟು ನೂರು ರೂಪಾಯಿಗಳ ಖರ್ಚು ಬೀಳುತ್ತದೆ ಎಂದರೆ ಅದರಲ್ಲಿ ಭಾರತ ಸರ್ಕಾರದವರು 25 ರೂಪಾಯಿ ಕೊಡುತ್ತಾರೆ, ಉಳಿದ 75 ರೂಪಾಯಿಗಳನ್ನು ಯಾರು ಹೊಲದೊಡೆಯರೋ ಅವರ ಮೇಲೆ ಹಾಕುತ್ತಾರೆ. ಈ ಹಣವನ್ನು ಭೂ ಒಡೆಯರಿಂದ ವಸೂಲು ಮಾಡುತ್ತಾರೆ. ಒಂದು ಎಕರೆಗೆ ಸುಮಾರು 75 ರೂಪಾಯಿಗಳ ತನಕ ರೈತರ ಮೇಲೆ ಬಂಡ್‌ಗಳನ್ನು ಹಾಕುವ ಸಂದರ್ಭದಲ್ಲಿ ಬೀಳುತ್ತದೆ ಎಂದು ಹೇಳುತ್ತಿದ್ದಾರೆ. ಇದರಿಂದ ಅವರಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಬಂಡ್ ಹಾಕಿಸುವಾಗ ಸರ್ಕಾರದವರು ಅರ್ಧ ಖರ್ಚನ್ನು ವಹಿಸಿಕೊಂಡು ಉಳಿದ ಅರ್ಧ ಖರ್ಚನ್ನು ಮಾಲೀಕನಿಗೆ ಹಾಕಬೇಕು. ಆಗ ಬಂಡಿಂಗ್ ಕೆಲಸ ಚೆನ್ನಾಗಿಯಾಗುತ್ತದೆ ಮತ್ತು ರೈತರೂ ಉದ್ಧಾರವಾಗುತ್ತಾರೆ. ಒಟ್ಟು ಖರ್ಚಿನಲ್ಲಿ ಭಾರತ ಸರ್ಕಾರದವರು ಶೇ॥ 25 ಕೊಡುತ್ತಾರೆ. ಉಳಿದ ಶೇ॥ 75ರಲ್ಲಿ ನಮ್ಮ ಸರ್ಕಾರದವರು ಶೆ॥ 37½ ವಹಿಸಿಕೊಂಡು ಶೇ॥ 37½ ರೈತ ವಹಿಸಬೇಕು. ಇದರಿಂದ ರೈತರಿಗೂ ಸಹಾಯವಾಗಿ ಕೂಲಿಕಾರರಿಗೆ ಅನುಕೂಲವಾಗುತ್ತದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಕೆರೆಯ ಕೆಲಸ ಮತ್ತು ಬಂಡಿಂಗ್ ಕೆಲಸ ಕೆಲವು ಕಡೆ ಇರಲಾರದು. ಅಂಥಕಡೆ ರಸ್ತೆ ಹಾಕಲಿಕ್ಕೇಬೇಕು. ರಸ್ತೆಯ ವಿಷಯದಲ್ಲಿ ಒಂದೇ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ಅದೇನೆಂದರೆ ಖಾಯಂ ಆಗಿ ಇರುವಂಥ ರಸ್ತೆಗಳನ್ನೇ ಮಾಡಿಸಿರಿ. ನಮ್ಮ ಕಡೆ ಹಿಂದೆ ಇದ್ದಂಥ ಒಬ್ಬ ಡೆಪ್ಯುಟಿ ಕಮಿಷನರು ಕೆಲವು ಕಡೆ ರಸ್ತೆ ಹಾಕಿಸಿ ಹೋದರು. ಈಗ ನಮ್ಮ ಸರ್ಕಾರದವರು ಯಾವ ರಸ್ತೆಗಳನ್ನು ಹಾಕಬೇಕೆಂದು ಹೋಗುತ್ತಾರೆಯೋ ಅವು 20 ವರ್ಷಗಳ ಕೆಳಗೆ ಹಾಕಿಸಿದಂಥ ರಸ್ತೆಗಳೇ ಅವು ಇಂದು ಈ ಸ್ಥಿತಿಗೆ ಬಂದಿವೆ. ಮಣ್ಣಿನ ರಸ್ತೆಗಳನ್ನು ಈಗ ಮಾಡಿದರೆ ಅವು ಮತ್ತೆ ಈಗಿರುವ ಸ್ಥಿತಿಗೇ ಬರುತ್ತವೆ. ಇದರಿಂದ ಸರ್ಕಾರದ ರೊಕ್ಕ ಖರ್ಚಾಗುವುದಲ್ಲದೆ ರಸ್ತೆ ಹಾಳಾಗಿ ಹೋಗುತ್ತದೆ. ಇಂಥ ಸ್ಥಿತಿ ಮುಂದೆ ಆಗಬಾರದು ಎಂಬ ಕಾರಣಕ್ಕಾಗಿ ಯಾವ ರಸ್ತೆಗಳನ್ನು ತೆಗೆದುಕೊಳ್ಳುತ್ತೀರೋ ಅವನ್ನು ಖಾಯಂ ರಸ್ತೆಗಳನ್ನಾಗಿ ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿನಂತಿ ಏನೆಂದರೆ ಕಾಳಿನ ಧಾರಣೆ ಏರುವ ಕಾಲಕ್ಕೆ ಕೂಲಿಯ ದರದಲ್ಲಿ ಕಡಮೆ ಮಾಡುತ್ತಿದ್ದಾರೆ. ಏನು ಕೂಲಿ ಕೊಡಬೇಕೆಂದಿರುತ್ತದೆಯೋ ಅದರಲ್ಲಿ ಶೇಕಡ 25 ಕಡಮೆ ಮಾಡುತ್ತಾರೆ. ಶೇಕಡ ಹತ್ತು ಏನಾದರೂ ಕಡಮೆ ಮಾಡಿದರೆ ನಮಗೆ ಉಪಕಾರ ಮಾಡಿದ ಹಾಗೆ ಎಂದು ತಿಳಿಯುತ್ತಾರೆ. ಕಾಳಿನ ಧಾರಣೆ ಏರುವ ಕಾಲಕ್ಕೆ ಕೂಲಿಯ ದರವನ್ನೂ ಇಳಿಸುವಂಥ ಕಾರ್ಯವನ್ನು ದಯವಿಟ್ಟು ಮಾಡಬೇಡಿ. ಹೆಚ್ಚಿಗೆ ಕೊಡುವುದಕ್ಕೆ ಶಕ್ಯವಿದ್ದರೆ ಆ ರೀತಿ ಮಾಡಿರಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಜೋಳದ ಧಾರಣೆ ಗೋಧಿ ಧಾರಣೆಯಷ್ಟಾಗಿದೆ ಎಂದು ಹೇಳುತ್ತೇನೆ. ಒಂದು ಮಣ ಗೋಧಿಗೆ 14 ರೂಪಾಯಿ ಇತ್ತು ಎಂದರೆ ಜೋಳಕ್ಕೆ 16ರಿಂದ 18 ರೂಪಾಯಿಗಳತನಕ ಹೋಗುತ್ತದೆ. ಇಂಥ ಕಾಲಕ್ಕೆ ನಮ್ಮಲ್ಲಿ ಮಂದಿಗೆ ಧಾರವಾಡ, ಬೆಳಗಾಂ, ಗುಲ್ಬರ್ಗ, ರಾಯಚೂರ್ ಮುಂತಾದ ಕಡೆಗೆ ಜೋಳವನ್ನು ತಂದು ಪೂರೈಸುವುದು ಉತ್ತಮ. ಸರ್ಕಾರದ ಕಡೆಯಿಂದ ಜೋಳವನ್ನು ತಂದು ಪೂರೈಸುವುದಕ್ಕಾಗುವುದಿಲ್ಲವೆಂದರೆ ಅಲ್ಲಲ್ಲಿ ಸಾಕಷ್ಟು ಗೋಧಿಯನ್ನು ಸ್ಟಾಕ್ ಮಾಡಿದ್ದು ಅದರಿಂದ ಪ್ರತಿಯೊಬ್ಬರಿಗೂ ಕಾಳನ್ನು ಕೊಡುವ ವ್ಯವಸ್ಥೆ ಮಾಡಿರಿ. ಈ ರೀತಿಯಾದ ವ್ಯವಸ್ಥೆಯನ್ನೂ ಮಾಡುತ್ತಿಲ್ಲ. ಹೀಗೆ ಮಾಡಲು ಆಗದೆ ಇದ್ದರೆ, ಪ್ರತಿಯೊಂದು ಕಡೆಯೂ ಕೋ-ಆಪರೇಟಿವ್ ಸೊಸೈಟಿಗಳನ್ನು ಮಾಡಿ ಅವುಗಳ ಮೂಲಕ ಗೋಧಿ, ಮತ್ತು ಅಕ್ಕಿ ಇವುಗಳನ್ನು ಹಂಚುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಮತ್ತೊಂದೇನೆಂದರೆ ಬಡಬಗ್ಗರಿಗೆ ಹೊದ್ದುಕೊಳ್ಳಲಿಕ್ಕೆ, ಹಾಸಿಕೊಳ್ಳಲಿಕ್ಕೆ, ಅಂಗಿ ಹಾಕಿಕೊಳ್ಳಲಿಕ್ಕೆ, ಶಕ್ಯವಿರುವುದಿಲ್ಲ. ಇಂಥ ಸ್ಥಿತಿಯಲ್ಲಿರುತ್ತಾರೆ. ಬಟ್ಟೆ ಇಲ್ಲದೆ ಬಹಳ ತೊಂದರೆ ಪಡುತ್ತಾರೆ. ಆದಕಾರಣ ಒಂದು ವ್ಯವಸ್ಥೆ ಮಾಡಿ ಬಡಬಗ್ಗರಿಗೆ ಬಟ್ಟೆ ಹಂಚಬೇಕು ಎಂದು ನನ್ನ ವಿನಂತಿ. ಅಲ್ಲದೆ ಇಂಥ ಜನರಿಗೆ ಡೋಲ್ ಕೊಡುವ ವ್ಯವಸ್ಥೆಯನ್ನು ಮಾಡಬೇಕು, ಈಗ ಕೆಲವು ಮಂದಿಗೆ ಡೋಲ್ ಕೊಡುತ್ತಿರುವಂತೆಯೇ ಇಂಥ ಜನರಿಗೂ ಕೊಡುವ ವ್ಯವಸ್ಥೆಯನ್ನು ಮಾಡಿರಿ. ಈ ಡೋಲ್ ಕೊಡುವಾಗ ಎರಡು ಮೂರು ತಿಂಗಳ ಮೇಲ್ಪಟ್ಟು ನಿಧಾನವಾಗುತ್ತದೆ. ಸೆಪ್ಟೆಂಬರ್ ತಿಂಗಳ ಡೋಲ್ ಮುಂದಿನ ಮಾರ್ಚ್ ತಿಂಗಳಿಗೆ ಕೊಡುತ್ತಾರೆ. ಆದುದರಿಂದ ಯಾವುದೇ ರೀತಿಯ ಸಹಾಯಗಳನ್ನು ಒದಗಿಸುವಾಗ ಕಾಲಕ್ಕೆ ಸರಿಯಾಗಿ ಒದಗಿಸಬೇಕು. ಎಷ್ಟು ಮಂದಿಗೆ ಡೋಲ್ ಕೊಡಬೇಕಾದ್ದು ಯೋಗ್ಯವಿದೆಯೋ ಅಷ್ಟು ಮಂದಿಗೂ ಕೊಡಿ ಆದರೆ ವೇಳೆ ವೇಳೆಗೆ ಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಕಡೆ ಕಡಿತ ಹಾಸ್ಯಿಯಾಗುತ್ತದೆಂದು ತಾವು ದಯವಿಟ್ಟು ಅನ್ನಬೇಡಿ. ಬ್ರಿಟಿಷ್ ಸರ್ಕಾರ ಇದ್ದ ಕಾಲಕ್ಕೆ ಸಹಿತ ಈ ವಿಚಾರವಾಗಿ ನಾವು ಆಗಿದ್ದ ಸರ್ಕಾರದವರಲ್ಲಿ ಡೆಪ್ಯುಟೇಷ್ ಹೋಗಿದ್ದ ಕಾಲಕ್ಕೆ ಸರ್ಕಾರದವರಿಗೆ ಇದರಿಂದ ಕೊಂಚ ಹಣ ಸಾಲ ಎತ್ತಿದರೂ ಹರಕತ್ತಿಲ್ಲ—ಇದಕ್ಕೆ ಋಣ ಎಷ್ಟು ಬೇಕಾಗುತ್ತೆಂಬುದನ್ನು ತಿಳಿಸಿ ಮಾಡಿಸೋಣ ಎಂದು ಎಂದಿದ್ದರು ಹಾಗೆ ಆ ಸರ್ಕಾರದವರ ಬಾಯಿಂದ ಬಂದಂಥ ಮಾತುಗಳು ಈಗ ನಮ್ಮ ಸರ್ಕಾರದವರ ಬಾಯಿಂದ ಬರಲಿ. ಸರ್ಕಾರದವರು ಇರತಕ್ಕ ಹಣವನ್ನು ಈಗಾಗಲೇ ಒಂಬತ್ತು ಜಿಲ್ಲೆಗಳಿಗೂ ಹಂಚಿಬಿಟ್ಟಿದ್ದೇವೆ ಎಂದು ಹೇಳದೆ ನಮ್ಮ ಜಿಲ್ಲೆಯಲ್ಲಿ ಕ್ಷಾಮ ನಿವಾರಣೆ ಕಾಂಗಾರಿಗಳನ್ನು ನಡೆಸಲೇಬೇಕು. ಅಲ್ಲಿ ಕೆರೆ ಬಂಡಿಂಗ್ ಕಾಂಗಾರಿಗಳನ್ನು ಸರ್ಕಾರದವರು ಮರೆಯಬಾರದೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ ಈಗ ಜರೂರಾಗಿ ಕೆಲಸಗಳು ನಡೆಯಬೇಕಾಗಿದೆ. ಆದುದರಿಂದ ಸರ್ಕಾರದವರು ಈ ಪ್ರಶ್ನೆಯನ್ನು ಜರೂರಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಸ್ವಾಮಿ, ಈಗ ಬೇರೆಯವರಿಗೆ.....

ಅಧ್ಯಕ್ಷರು.—ಯಾರಿಗೇ ಆಗಲಿ ಯಾವ ವಿಷಯದಲ್ಲಾಗಲೀ ಇರತಕ್ಕ ನಿಬಂಧನೆಗಳನ್ನು ಮುರಿದು ಮಾತನಾಡಲಿಕ್ಕೆ ಅವಕಾಶ ಕೊಡಲು ಸಾಧ್ಯವಿಲ್ಲ. ಮಾನ್ಯ ಸದಸ್ಯರುಗಳ ತಿಳಿವಳಿಕೆಗಾಗಿ ನಾನು

(ಅಧ್ಯಕ್ಷರು)

ಮತ್ತೊಮ್ಮೆ ರೂಲ್ 61ನ್ನು ಈಗ ಓದಿ ಹೇಳುತ್ತೇನೆ. ಹೀಗಿರುವುದರಿಂದ ಈಗಾಗಲೇ ಯಾರು ನನಗೆ ಬರೆದು ಮಾತನಾಡುವುದಾಗಿ ತಿಳಿಸಿದ್ದಾರೋ ಅಂಥವರಿಗೆ ಮಾತ್ರ ಮಾತನಾಡಲು ಅವಕಾಶ ಕೊಡಲಾಗುವುದು. ಬಾಕಿ ಯಾರಿಗೂ ಮಾತನಾಡಲು ಅವಕಾಶವಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಹೇಳಿದ ಮೇಲೆ ನೋಟೀಸ್ ಕೊಟ್ಟಿರತಕ್ಕ ಬಾಕಿ ಸದಸ್ಯರು ಅಗತ್ಯ ವಿದ್ದರೆ ಸ್ವಲ್ಪ ಸ್ವಲ್ಪ ಮಾತನಾಡಬಹುದು.

ಶ್ರೀ ಕಡಿದಾಳ್ ಮಂಜಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಮಾತನಾಡತಕ್ಕ ಸದಸ್ಯರೆಲ್ಲರೂ ಮುಗಿದನಂತರ ಸರ್ಕಾರದವರು ಉತ್ತರ ಕೊಡ ಬೇಕೆಂದಿದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳಿಗೆ ಒಂದೇ ಸಾರಿ ಉತ್ತರ ಕೊಡಬೇಕೆಂದು ಎಲ್ಲಿಯೂ ಹೇಳಿಲ್ಲ. ಅವರು ಎರಡನೆಯ ಸಾರಿಯೂ ಬೇಕಾದರೆ ಉತ್ತರ ಕೊಡ ಬಹುದು.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ಸರ್ಕಾರ ದುಡ್ಡು ವಸೂಲ್ಮಾಡಬೇಕು, ಮತ್ತು ದುಡ್ಡನ್ನು ದೇಶಕ್ಕೋಸ್ಕರ ಒಳ್ಳೆಯದಕ್ಕೋಸ್ಕರ ಖರ್ಚು ಮಾಡಬೇಕು ಎಂದು ನನ್ನ ಸ್ನೇಹಿತರು ಹೇಳಿದ ಹಾಗೆ, ಒಪ್ಪಿ ಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಸರ್ಕಾರ ತಮಗೆ ಬರಬೇಕಾದಂಥ ಹಣವನ್ನು ವಸೂಲ್ಮಾಡಲು ನಮ್ಮ ಕೈಯಿಲ್ಲಿ ಒಂದು ಕಾನೂನಿಗೆ ಮುದ್ರೆ ಒತ್ತಿಸಿಕೊಂಡು, ಅವರು ಮಾಡಿದ ಅಪರಾಧಕ್ಕೆ ಎಲ್ಲರನ್ನೂ ಭಾಗಿಗಳಾಗಿ ಎಂದು ಕೇಳುತ್ತಿದ್ದಾರೆ. ಇದು ನ್ಯಾಯವೇ ಎಂದು ಕೇಳುತ್ತೇನೆ. 1953-54ರಲ್ಲಿ ನಡೆದು ಹೋದಂಥ ಒಂದು ಅಪಘಾತವನ್ನು ಇವೊತ್ತಿನ ದಿವಸ ಹಣಕಾಸಿನ ನಚಿವರು ಸರಿಪಾಡುವುದಕ್ಕೆ ಹೊರಟಿದ್ದಾರೆ. ಸತ್ತು ಹೋದವರಿಗೆ ನಾಮಕರಣ ಮಾಡುತ ಇರುವುದು ಏಕೆ ಎಂದು ಸರ್ಕಾರವನ್ನು ನಾನು ಕೇಳುತ್ತಿದ್ದೇನೆ. ಆಗ ಇದ್ದವರು ಯಾರೇ ಇರಲಿ, ಆಗಿನ ಹಣಕಾಸಿನ ನಚಿವರು ಮಾಡಿದ ದೋಷವನ್ನು ನೀವು ಸರಿ ಮಾಡುವುದಕ್ಕೆ ಹೋಗಿ ದೇಶದ ಜನತೆಯ ಶಾಪಕ್ಕೆ ಏಕೆ ಗುರಿಯಾಗುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ವಸೂಲುಮಾಡಲೇಬೇಕು ಎಂದು ನಿಮ್ಮ ಸ್ನೇಹಿತರು ಹೇಳಿದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನೂ ವಸೂಲ್ಮಾಡಿ ಎಂದು ಹೇಳುತ್ತೇನೆ. ದೇಶದ ಅಭ್ಯುದಯಕ್ಕೋಸ್ಕರ ಯಾವ ಯಾವ ಕ್ರಮವನ್ನು ತೆಗೆದುಕೋಳ್ಳಬೇಕೋ, ಅವನ್ನು ತೆಗೆದುಕೊಂಡು, ಎಲ್ಲೆಲ್ಲಿ flug ಮಾಡಬೇಕೋ ಅಲ್ಲೆಲ್ಲಮಾಡಿ, leakages ನಿಲ್ಲಿಸಿ ಹಣ ಸಂಪಾದನೆ ಮಾಡುವ ಮಾರ್ಗವನ್ನು ಕಂಡು ಹಿಡಿಯಿರಿ. ಇಂಥ ಮಾರ್ಗ ಮಾತ್ರ ಬೇಡ. ಏಕೆ ಹೀಗೆ ಹೇಳುತ್ತಿದ್ದೇನೆಂದರೆ, ನಿಮ್ಮಲ್ಲಿ ಒಬ್ಬ ಲಾಸೆಕ್ರೆಟರಿ, ಒಬ್ಬ ರೆವೆನ್ಯೂಸೆಕ್ರೆಟರಿ ಮತ್ತು ಒಬ್ಬ ಚೀಫ್ ಸೆಕ್ರೆಟರಿ, ಇವರ ಜೊತೆಗೆ ಏಳು ಜನಗಳಿಂದ ಕೂಡಿದಂಥ ಮಂತ್ರಿ ಮಂಡಳವಿತ್ತು. ಹೀಗಿರುವಾಗ ಒಂದು ಸರ್ವೇಸಾಮಾನ್ಯವಾದ notification ಹೊರಡಿಸುವಾಗ ಅದರ validity, ಏನು, ಎಷ್ಟು ದೂರ ತೆಗೆದುಕೊಂಡು ಹೋಗುತ್ತದೆ, ಅದು ನರಿಯೇ, ತಪ್ಪೇ ಎಂದು ಯೋಚನೆಮಾಡದೆ ಒಂದು wrong notification ಹೊರಡಿಸಿದಿರಿ. ಅದರ ಮೇಲೆ constitutional ಆಗಿ, ಎಲ್ಲರಿಗೂ ಯಾವುದು ನರಿಯಾಗಿದೆಯೋ ಅಂಥಮಾರ್ಗವನ್ನು ನರಿಸಿ ಆ ನೋಟಿಫಿಕೇಷನ್ನಿನಿಂದ ಭಾದಿತರಾದವರು ಕಡೆಗೆ ಹೈಕೋರ್ಟಿನಲ್ಲಿ ಪರಿಹಾರವನ್ನು ಪಡೆದರು. ಅವರಿಗೆ ಈ ರೀತಿ ನ್ಯಾಯ ತಿರ್ಮಾನವನ್ನು ಪಡೆಯಲು constitutional opportunities pursue ಮಾಡಬೇಡಿ, ಕೋರ್ಟು ಕಚೇರಿಗಳಿಗೆ ಹೋಗಬೇಡಿ, ನಾವು ಮಾಡಿದ್ದೇ ನರಿ ಎಂದು ಇವೊತ್ತಿನ ದಿವಸ ನಮ್ಮಗಳಿಂದ ಒಪ್ಪಿಗೆ ಪಡೆದು ಸೀಲ್ ಹಾಕಿಸಬೇಕೆಂದಿರುವುದು ನರಿಯೇ ಎಂದು ಕೇಳುತ್ತೇನೆ. ಹೈಕೋರ್ಟಿನಲ್ಲಿ ಈ ಕೇಸಿನ ಜಡ್ಜ್‌ಮೆಂಟ್ ಹೇಳಿದ ದಿವಸ ನಾನೂ ಇದ್ದೆ. ಶ್ರೇಷ್ಠನ್ಯಾಯಾಧೀಶರ ಮನಸ್ಸಿನಲ್ಲಿದ್ದಂಥ ಉದ್ವೇಗವನ್ನು ಶ್ರೀ ಮಾರ್ ಮರಿಯಪ್ಪನವರು ರಾಯರ್ ಆಗಿ ವೀಕ್ಷಣೆಮಾಡಿದ್ದರೆ ಚೆನ್ನಾಗಿತ್ತು. ಅವರ ತಿರ್ಮಾನದಲ್ಲಿ ಸರ್ಕಾರ ನಡೆಸತಕ್ಕವರು ಎಷ್ಟು ಚತುರರಿರಬೇಕು, ಎಷ್ಟು ಬುದ್ಧಿವಂತಿಕೆಯಿಂದ ವ್ಯವಹಾರ ಮಾಡಬೇಕು, ಬುದ್ಧಿವಂತಿಕೆ ಇಲ್ಲದಿದ್ದರೆ ದೇಶದ ಜನತೆ ಎಷ್ಟುಕಷ್ಟಕ್ಕೆ ಈಡಾಗುತ್ತದೆ ಎಂದು ಟೀಕೆ ಮಾಡುತ್ತಿದ್ದ ರೀತಿಯನ್ನು ನೋಡಿದರೆ ನನಗಾದರೂ ಅನ್ನಿಸುತ್ತದೆ, ಸ್ವಲ್ಪ ಕಾಲ ಇವರು ಏಕೆ ಮರೆಯಾಗ ಬಾರದೆಂದು.

ಒಬ್ಬ ಸದಸ್ಯರು.—ಮರೆ ಎಂದರೇನು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಸ್ನೇಹಿತರು ಬೇರೆ ರೀತಿಯಲ್ಲಿ ಅರ್ಥಮಾಡಬಾರದು. ದೇವರು ಅವರಿಗೆ ಆರೋಗ್ಯವನ್ನು ಆಯುಷ್ಯವನ್ನು ಕೊಡಲಿ. ಅವರು ಸ್ವಲ್ಪ ಕಾಲ ರಾಜಕೀಯದಿಂದ ನಿವೃತ್ತರಾಗಲಿ ಮತ್ತು ಈಗಿರುವ ಅಧಿಕಾರದಿಂದಲೂ ನಿವೃತ್ತರಾಗಲಿ. ಇವರು ಮಂತ್ರಿಗಳಾಗಿರಬೇಕಾಗಿಲ್ಲ. ಈ ದೇಶದಲ್ಲಿ ಅಧಿಕಾರ ಮಾಡತಕ್ಕವರಿಗೆ ಬುದ್ಧಿವಾದ ಹೇಳಬೇಕೆಂದು ಸೂಚಿಸುತ್ತೇನೆ. ತಾವು ಅಧಿಕಾರದಲ್ಲಿದ್ದು ಕೊಂಡು ತಾವು ಮಾಡಿದ ತಪ್ಪನ್ನು ತಾವೇ ತಲೆಯ ಮೇಲೆ ಹೊತ್ತುಕೊಂಡು ತಾವು ಮಾಡಿದ್ದೇ ನರಿ ಎಂದು ಹೇಳುವಂಥ ಮಾರ್ಗವನ್ನು ಅನುನರಿನುವುದು ಬೇಡ, ಇತರರು ತಪ್ಪುಮಾಡಿದುದನ್ನು ತಿದ್ದುವಕಾರ್ಯ ಮಾಡಲಿ, ಮನೆಯ ಯಜಮಾನರಂತೆ ಇರಲಿ ಎಂದು ಹೇಳುತ್ತೇನೆ. ಈ ಕೇಸಿನಲ್ಲಿ ಕಕ್ಷಿಗಾರರಿಗೆ ಏನಾದರೂ ಹೈಕೋರ್ಟಿನಲ್ಲಿ ವಿರೋಧವಾದ ತೀರ್ಪುಬಂದಿದ್ದರೆ, ಅವರು ಸುಪ್ರೀಂಕೋರ್ಟಿಗೆ ಹೋಗುತ್ತಿದ್ದರು. ಸರ್ಕಾರದವರು ಹೈಕೋರ್ಟ್ ಜಡ್ಜ್‌ಮೆಂಟನ್ನು ಬೈಪಾಸ್ ಮಾಡುತ್ತಿದ್ದಾರೆ. ನಾನು 57 ರೂಪಾಯಿ ಕೊಟ್ಟು ಜಡ್ಜ್‌ಮೆಂಟ್ ಕಾಪಿಗಳನ್ನು ತೆಗೆದು ಕೊಂಡಿದ್ದೇನೆ. ನನಗೆ ಆವಿಷಯವೆಲ್ಲ ಗೊತ್ತು.

ಶ್ರೀ ಟಿ. ಮರಿಯಪ್ಪ.—ನಾವು ಈಪ್ರಸೂದೆಯನ್ನು ತರದೆ ಹೋಗಿದ್ದರೆ ಏಕೆ ತರಲಿಲ್ಲವೆಂದು ಹಿಡಿದುಕೊಳ್ಳುವುದಕ್ಕೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದು ನಿಜ.

ಹೈಕೋರ್ಟಿನವರು ಇದರಲ್ಲಿ ಎಷ್ಟುದೂರ ಟೀಕೆ ಮಾಡಿದ್ದಾರೆಂದರೆ Communal orderಗೆ ಸಂಬಂಧಪಟ್ಟಂತೆ ಮಾಡಿರುವ ಟೀಕೆಗಿಂತಲೂ ಉಗ್ರವಾದ ಟೀಕೆಯನ್ನು ಮಾಡಿದ್ದಾರೆ. ಮಂತ್ರಿಗಳೂ ಅದನ್ನು ತರಿಸಿಕೊಂಡಿದ್ದಾರೆ. ಅದನ್ನೆಲ್ಲ ಓದಿಯೇ ಈ ರೀತಿ ಮಾಡಿದ್ದಾರೆ. 1953ರಲ್ಲಿ ಇವರ ಬುದ್ಧಿ ಏನುಮಾಡುತ್ತಿತ್ತು. ಆ ದಿನ ಮಾಡಬೇಕಾಗಿದ್ದುದನ್ನು ಇವೊತ್ತು ಮಾಡಿ, ಹಿಂದಿನಿಂದ ಜಾರಿಗೆ ಬಂದ ರೀತಿಯಲ್ಲಿ retrospective effect ಕೊಡಿ ಎಂದು ಕೇಳುತ್ತಿದ್ದಾರೆ. ನಾವು ಈ ಸಭೆಯ ಸದಸ್ಯರಾಗುತ್ತೇವೆಂಬ ಕನಸು ಕೂಡ ಅಂದು ನಮಗೆ ಇರಲಿಲ್ಲ, ನಿಮ್ಮ ಎದುರಿಗೆ ಈ ಸಭೆಯಲ್ಲಿ ಕುಳಿತುಕೊಳ್ಳುತ್ತೇವೆನ್ನುವ ಆಸೆಯೂ ಇರಲಿಲ್ಲ. ಇಂಥದಕ್ಕೆ ನಮ್ಮ ಒಪ್ಪಿಗೆಯನ್ನು ಪಡೆದು

ಸೀಲ್ ಹಾಕಿಸಿ ಕೊಳ್ಳುತ್ತಿದ್ದೀರಿ. ನಾನು ವೈಯಕ್ತಿಕವಾಗಿ ಯಾರಪಿಷಯವಾಗಿಯೂ ಮಾತನಾಡುತ್ತಿಲ್ಲ. 30 ವರ್ಷಗಳ ಹಿಂದೆ ನಿಮ್ಮ ತಂದೆ ತಾಯಿಗಳ ಕಾಲದಲ್ಲಿ ಆಸ್ತಿಕ್ಯೆಬಿಟ್ಟುಹೋಗಿದ್ದರೆ, ಇವೊತ್ತಿನ ದಿವಸ ಬೇರೆ ಒಂದು ಕಾನೂನನ್ನು ಮಾಡಿ ಆಗ ಆಸ್ತಿಯನ್ನು ಸಂಪಾದನೆ ಮಾಡಬೇಕೆಂದು ಹೋಗತಕ್ಕ ಮಾರ್ಗ ಸರಿಯೇ ಎಂದು ಕೇಳುತ್ತಿದ್ದೇನೆ. ಇದೇ ರೀತಿ ಈಗ ತಂದಿರುವ ಮಸೂದೆಯೂ ಆಗಿದೆ. ವೃಥಾ ಹೈಕೋರ್ಟಿಗೆ ಏಕೆ ಹಣ ಖರ್ಚು ಮಾಡುತ್ತೀರಿ?

ಶ್ರೀ ಟಿ. ಮರಿಯಪ್ಪ.—ಮುಕ್ಕಾಲುಪಾಲುವಸೂಲುಮಾಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮುಕ್ಕಾಲು ಪಾಲು ವಸೂಲುಮಾಡಿದ್ದರೆ ಅದನ್ನು ವಾಪಸುಕೊಡಬೇಕು, You are bound to pay it back in the light of the judgement of the High court. They will five a suit and recoler the money.

ಶ್ರೀ ಟಿ. ಮರಿಯಪ್ಪ.—ವಾಪಸುಕೊಡುವುದನ್ನು ತಪ್ಪಿಸುವುದಕ್ಕೆ ಇದನ್ನು ತಂದಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಏನು ಧರ್ಮನ್ಯಾಯ

ಶ್ರೀ ಟಿ. ಮರಿಯಪ್ಪ.—ವಾಪಸುಕೊಡಿಎಂದು ಹೇಳುತ್ತೀರಾ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೊಡಿ. ನ್ಯಾಯ, ಧರ್ಮನತ್ಯ ಇಹೆ ಎಂದು ಹೇಳುತ್ತೀರಿ. ಮಾಡುವುದನ್ನು ಮಾಡಿಯೇ ತೀರುತ್ತೀರಿ. ನ್ಯಾಯ, ನತ್ಯ, ಧರ್ಮಾ ಒಂದೂ ಇಲ್ಲ. ಮಹಾತ್ಮ ಗಾಂಧಿಯವರು ಪಾಕಿಸ್ತಾನಕ್ಕೆ 87 ಕೋಟಿರೂಪಾಯಿಗಳನ್ನೂ ಕೊಡಬೇಕಾಗಿ ತ್ತೋ ಅಥವಾ ಇಲ್ಲವೋ, ಕೊಡಿ ಎಂದು ಹೇಳಿದಾಗ ಇಂಡಿಯಾ ನರ್ಕಾರದವರು ಏನೂ ಮಾತನಾಡದೆ ದುಡ್ಡು ಕೊಟ್ಟರು; ಅದು ಧರ್ಮ.

ಶ್ರೀ ಟಿ. ಮರಿಯಪ್ಪ.—ನಭೆಯವರೆಲ್ಲ ಒಪ್ಪಿಕೊಂಡರೆ ವಾಪಸುಕೊಡುತ್ತೇವೆ. ಖಂಡಿತವಾಗಿಯೂ ಇದನ್ನು ವಸೂಲ್ಮಡತಕ್ಕದ್ದೆಂದು ನಿಮ್ಮ ಸ್ನೇಹಿತರು ಹೇಳಿದರು.

Sri M.C. NARASIMHAN.—If it is lawfully due.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಚತುರರೇ. ಆದರೆ ನಿಮ್ಮ ಚತುರತೆ ಸ್ವಲ್ಪ ಕಾಲ ಎಡವಿ ಬೀಳುತ್ತದೆ. ಕಾಲಪುರುಷನು ನಮ್ಮಿಬ್ಬರ ಮೇಲೂ ಕೈಇಟ್ಟು ಕೊಂಡು ಅಸ್ತು, ಅಸ್ತು ಎಂದು ಹೇಳುತ್ತಿದ್ದಾನೆ.

ಹಣ ಬೇಕು, ನಿಜ. ಮದ್ರಾಸು ಷುಗರ್ ಫ್ಯಾಕ್ಟರಿ ಕಂಟ್ರೋಲ್ ಪ್ರಕಾರ ನೊಟೀಸ್ ಕೊಟ್ಟಿದ್ದರೆ, ಇನ್ ವ್ಯಾಲಿಡೇಟ್ ಆಗುತ್ತಿರಲಿಲ್ಲ. ಅವತ್ತಿನ ದಿವಸ ರಾಂಗ್ ನೋಟಿಫಿಕೇಷನ್ ಕೊಟ್ಟು, ಅದು ಹೈಕೋರ್ಟಿಗೆ ಹೋಗಿ ಕ್ವಾಷ್ ಆಗಿ ಇನ್ನು ಒಂದು ತಿಂಗಳು ಕಾಲ ಆಗಿಲ್ಲ. ನೀವು ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೀರಿ.

ಶ್ರೀ ಟಿ. ಮರಿಯಪ್ಪ.—ಅಷ್ಟು ಬೇಗನೆ ತಂದಿದ್ದೇವಲ್ಲಾ ಎಂದು ತಾವು ಅಪ್ರಿಷಿಯೇಟ್ ಮಾಡಬೇಕು

Sri K. KENCHAPPA (Hiriyur).—This aspect may be discussed instead of going astray. The Statement of Objects and Reasons reads like this :

"In a recent decision of the High Court of Mysore in which the validity of the notifications issued on 9th April 1956, 15th October 1957 and 11/12th February 1958 in respect of the crushing seasons of 1955-56, 1956-57 and 1957 58 were questioned....."

How were the notifications questioned and how were they invalidated, and what was the reason to consider the notifications to be invalid, are not explained and in the absence of such an explanation, it is rather very difficult for the Members to catch the point at issue. I do not know what to speak and what not to speak. For argument's sake, is it the intention of the Government to give retrospective effect to the amendment not only with respect to the cesses collected and not questioned but to cesses collected and questioned and and decision given by the High Court? These are the two things I want.

Sri T. MARIAPPA.—I will clarify this point later on.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನರ್ಕಾರ ಏನು ತಪ್ಪುಮಾಡಿದರೂ ನರ್ಕಾರದ ಮೇಲೆ ಹಾಕಬಾರದು ಎನ್ನುವ ಅಭಿಪ್ರಾಯ ಜನತೆಗೆ ಬರುತ್ತದೆ. ಕಮ್ಯೂನಿಸ್ಟ್‌ ಇದ್ದಾರೆ. ಅವರನ್ನು ಡೀಟೇನ್ ಮಾಡಿಬಿಟ್ಟರೆ ಅವರು ಹೈಕೋರ್ಟಿಗೆಹೋಗಿ ಕ್ವಾಷ್ ಮಾಡಿಸಿ ಬಿಟ್ಟು, ತಪ್ಪ ಆರ್ಡರ್ ಇಲ್ಲೀಗಲ್ ಎಂದು ಹೇಳಿದರೆ ಆಗ ತಾವು ಅಸೆಂಬ್ಲಿಯಲ್ಲಿ ಒಂದು ಕಾನೂನನ್ನು ತಂದು ನಿಮ್ಮ ಡಿಟೆನ್‌ಷನ್ ಆರ್ಡರ್ ನರಿಯಾಗಿದೆ, ಎಲ್ಲಿ ತಪ್ಪು ಮಾಡಿದ್ದೇವೆಂದು ಹೇಳಿದರೆ ನಮ್ಮ ಗತಿಯೇನು? ನರ್ಕಾರದ ಬಾಧೆ ತಪ್ಪಿಸಿಕೊಳ್ಳುವುದಕ್ಕೆ ಹೈಕೋರ್ಟ್ ಇದೆ. ಆದರೆ ಹೈಕೋರ್ಟಿಗೆ ನರ್ಕಾರದವರು ಸ್ಟೇ ಆರ್ಡರ್ ಕೊಡುತ್ತಿದ್ದಾರೆಂದು ಭಯ. ಅದಕ್ಕೊಸ್ಕರ 42 ಲಕ್ಷ ರೂಪಾಯಿಗಳು ಹೋದರೂ ಚಿಂತೆಯಿಲ್ಲ. ನೀವು ಮಾಡುವ ದೋಷಕ್ಕೆ ಜನಗಳನ್ನು ಹಿಂಸೆ ಮಾಡಬೇಡಿ, ನ್ಯಾಯವಾಗಿ ಬರತಕ್ಕ ದುಡ್ಡನ್ನು ವಸೂಲುಮಾಡಿ, ಮತ್ತು ಅದರಿಂದ ದೇಶಕ್ಕೆ ಅನುಕೂಲ ಮಾಡಿ. ನ್ಯಾಯ ನ್ಥಾನದ ತೀರ್ಮಾನದ ವಿರುದ್ಧ ತಿದ್ದುಪಡಿಯನ್ನು ತಂದು ವಸೂಲು ಮಾಡುವುದು ಧರ್ಮಕ್ಕೆ ವಿರೋಧ. ಅದಕ್ಕೊಸ್ಕರ ಮಾನ್ಯ ಮರಿಯಪ್ಪನವರು ಇದನ್ನು ಕನ್‌ಸಿಡರ್ ಮಾಡಬೇಕು ಇದನ್ನು ತೀವ್ರವಾಗಿ ಆಲೋಚನೆ ಮಾಡಬೇಕು ಎಂದು ಹೇಳುತ್ತೇನೆ. ನೀವೇ ಆ ನ್ಥಾನದಲ್ಲಿ ಇದ್ದರೆ ಏನು ಮಾಡುತ್ತಿರಿ ಎಂದು ಕೇಳುತ್ತೇನೆ. ಇನ್ನೊಂದು ಭಯ ಇದೆ. ಅದೇನೆಂದರೆ, ಈ ಅಮೆಂಡ್‌ಮೆಂಟ್ ಪಾಸ್ ಆದ ಮೇಲೆ ಇರತಕ್ಕ ಹಣವನ್ನು ವಸೂಲು ಮಾಡಿದರೆ ಮತ್ತೆ ಹೈಕೋರ್ಟ್, ಸುಪ್ರೀಮ್ ಕೋರ್ಟ್ ನವರು ನಾವು ಮಾಡಿದಂಥ ಅಮೆಂಡ್‌ಮೆಂಟ್ ನರಿಯಲ್ಲ ಎಂದು ತೀರ್ಮಾನ ಕೊಡುವ ನಂಭವವಿದೆ. ಯಾವ ಮನುಷ್ಯ ಹೈಕೋರ್ಟಿಗೆ ಹೋಗಿ ತೀರ್ಪನ್ನು ಪಡೆದಿದ್ದಾನೋ ಅವನು ಈ ಅಮೆಂಡ್‌ಮೆಂಟಿನ ಮೇಲೆ ಹೈಕೋರ್ಟ್ ಮತ್ತು ಸುಪ್ರೀಮ್ ಕೋರ್ಟಿಗೆ ಹೋಗು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸಂದರ್ಭ ಇರುತ್ತದೆ. ಈ ಸಭೆಯು ಒಪ್ಪಿಗೆ ಕೊಡುವ ತಿದ್ದುಪಡಿಯನ್ನು ಕೂಡ ಅದೇ ರೀತಿ, ಷನರ್ ಎಂಡ್ ವಾಯಿಡ್' ಮಾಡಿದ ಹಾಗೆ ಆಗುತ್ತದೋ ಎನ್ನುವ ಭಯ ಇದೆ ಎಲ್ಲೋ. ಕುಳಿತುಕೊಂಡು ಹಣ ವಸೂಲು ಮಾಡುವುದಕ್ಕೆ ಹೋಗುತ್ತಿದ್ದಾರೆ. ಇದು ಧರ್ಮವಲ್ಲ. ಧರ್ಮಸ್ಥಾಪಕರು, ಮಹಾತ್ಮ ಗಾಂಧಿಯವರ ಹೆಸರಿನಲ್ಲಿ ರಾಜ್ಯ ಆಳುವವರು ತಾವು. ಹಣಬೇಕು ಎಂದು ಆಶೆ ತಮಗೆ ಇದೆ. ಆದರೆ ಈ ಆಶೆ ಮನುಷ್ಯನನ್ನು ಬಹಳ ದೂರ ಎಳೆದು ಕೊಂಡು ಹೋಗುತ್ತದೆ. ನೀವು ಧರ್ಮ ಕರ್ಮ ಆಲೋಚನೆಮಾಡಬೇಕು. ಶ್ರೀ ಕಡಿದಾಳ್ ಮಂಜಪ್ಪನವರು ಮತ್ತು ಮರಿಯಪ್ಪನವರು ಷುಗರ್ ಫ್ಯಾಕ್ಟರಿ ಹಣವನ್ನು ವಸೂಲು ಮಾಡುವುದಕ್ಕೆ ಬೇರೆ ಮಾರ್ಗ ಇದ್ದರೆ ವಸೂಲು ಮಾಡಲಿ. ಈ ಹಣವಸೂಲು ಮಾಡುವುದಕ್ಕೆ ಯಾವ ಮಾರ್ಗ ಇದೆ? ಹೈಕೋರ್ಟ್ ಜಡ್ಜ್‌ಮೆಂಟ್‌ಗೆ ಬೆಲೆ ಇಲ್ಲದ ಮೇಲೆ ಈ ಅಸೆಂಬ್ಲಿಯಲ್ಲಿ ಕಾನೂನನ್ನು ಪಾಸು ಮಾಡಿದರೆ ಏನು ಪ್ರಯೋಜನ? ಧರ್ಮಶ್ರದ್ಧೆ ಇರುವ ನೀವು ಧರ್ಮದ ಅಡಿಯೊಳಗೆ ರಾಜ್ಯ ಭಾರ ಮಾಡುವ ಜನ, ಈ ರೀತಿ ಹಣ ವಸೂಲು ಮಾಡುವುದು ಸರಿಯಲ್ಲ ಎಂದು ಎನಿಸುತ್ತದೆ. ನಮ್ಮ ರಾಜ್ಯದಲ್ಲಿರುವ ಹೈಕೋರ್ಟಿಗೆ ಸ್ಟೇ ಆರ್ಡರ್ ಕೊಡುವ ಅಧಿಕಾರ ನಮ್ಮ ಸರ್ಕಾರಕ್ಕೆ ಬಂತಲ್ಲ ಎಂದು ಬಹಳ ವ್ಯಸನದಿಂದ ಹೇಳುತ್ತೇನೆ 42 ಲಕ್ಷ ರೂಪಾಯಿಗಳು ಹೋದರೂ ಮೈಸೂರು ಸಂಸ್ಥಾನ ನಿಜವಾಗಿ ದಿವಾಳಿ ಆಗುವುದಿಲ್ಲ. ಜನ ಏನೆನ್ನುತ್ತಾರೆ ಎಂಬುದನ್ನು ತಿಳಿದುಕೊಳ್ಳಿ. ನನ್ನ ಮಾತು ಕಿಡಿನಬಹುದು, ಅಥವಾ ಕಿಡಿನದೆ ಇರಬಹುದು. ಜಗತ್ತಿನ ಜನ, ಹಿಂದೂಸ್ಥಾನದ ಜನ ನಿಮ್ಮ ವಿಚಾರದಲ್ಲಿ ಏನೆನ್ನುತ್ತಾರೆ ಎಂಬುದನ್ನು ಆಲೋಚನೆ ಮಾಡಿ. ಹೈಕೊರ್ಟ್ ಚೀಫ್ ಜಡ್ಜ್ ಏನು ಹೇಳುತ್ತಾರೆ; ಜಡ್ಜ್‌ಮೆಂಟ್ ಕೊಟ್ಟರೆ ಅಮೆಂಡ್‌ಮೆಂಟ್ ತಂದು ಮೈಸೂರು ಸರ್ಕಾರದವರು ನಾವು ಮಾಡಿರುವ ಆರ್ಡರ್ಸ್‌ಗೆ ಅಡ್ಡಿ ಆತಂಕ ಒದ್ದುತ್ತಾರೆ ಎಂದು ಆಲೋಚನೆ ಮಾಡುತ್ತಾರೆ. ಇದು ಒಂದು ಪಾರ್ಟಿಯ ಮಾತಲ್ಲ. ದೊಡ್ಡಪ್ಪನಮಗ ಚಿಕ್ಕಪ್ಪನಮಗನ ವಿಚಾರವಲ್ಲ. ದೇಶದ ದುಡ್ಡು ದೇಶಕ್ಕೆ ಬರಬೇಕು. ಆದರೆ ಕಾನೂನು ಬದ್ಧವಾದ ಜಡ್ಜ್‌ಮೆಂಟ್ ಎದುರಿನಲ್ಲಿ ಕಾನೂನು ತಿದ್ದುಪಡಿ ಮಾಡಿ ಅದರ ಮುಖಾಂತರ ಹಣವಸೂಲು ಮಾಡುವುದು ಸರಿಯಲ್ಲ ಎಂದು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ರಾಂಗ್ ನೋಟಿಫಿಕೇಷನ್ ಇಷ್ಯೂಮಾಡಿದುದರಿಂದ ವಸೂಲು ಮಾಡಿ ಅವರ ಆಸ್ತಿ ಪಾಸ್ತಿ ಮುಟ್ಟುಗೋಲು ಹಾಕಿ, ರಾಂಗ್ ಅಡ್ವೈಜ್ ಕೊಟ್ಟವರಿಂದ ವಸೂಲು ಮಾಡಿ ಎಂದು ಶ್ರೀ ಮರಿಯಪ್ಪನವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜನರು ಜತ್ತಿಯವರನ್ನು ಬೊಮ್ಮೇಗೌಡರನ್ನು ಮೂಡಲಗಿರಿ ಗೌಡರನ್ನು ಅನ್ನುವುದಿಲ್ಲ. ನಮ್ಮನ್ನು ಅನ್ನುತ್ತಾರೆ ಜನಗಳಿಗೆ ಇಷ್ಟು ತೀರ ತೊಂದರೆ ಕೊಡಬೇಡಿ ಎಂದು ಶ್ರೀ ಮರಿಯಪ್ಪನವರಿಗೆ ಹೇಳುತ್ತೇನೆ. ನಾನು ಟೀಕೆ ಮಾಡುವಾಗ ದಾರಿಬಿಟ್ಟು ಹೋಗಿಲ್ಲ. ಹಾಗೆ ಹೋದರೆ ನನಗೆ ಬುದ್ಧಿ ಹೇಳುವ ಅಧಿಕಾರ ನಿಮಗೆ ಉಂಟು. ಆದರೆ ಯಾವುದೋ ಪೊಲಿಟಿಕಲ್ ಕನ್‌ಸಿಡರೇಷನ್ನಿಗಾಗಿ ಅಷ್ಟು ಗಮನ ಕೊಡಬೇಡಿ. ಮರಿಯಪ್ಪನವರನ್ನು ತಗೆಯಿರಿ, ಕೆಳಗೆ ಇಳಿಸಿರಿ ಎಂದು ನಿಮ್ಮ ಗುಂಪಿನವರೇ ಹೇಳುತ್ತಾರೆ. ಮುಕ್ಕಣ್ಣಪ್ಪ ಹಾಗೆ ಮಾಡುತ್ತಾನೆ, ಹೀಗೆ ಮಾಡುತ್ತಾನೆ ಎಂದು ಹೇಳುತ್ತಾರೆ.

Sri J. H. SHAMSUDDIN (Deputy Minister for Finance).—What has all that to do with this Bill?

Sri C. J. MUCKANNAPPA.—It is in relation to this Bill I am speaking. why not my friends bear with me? ಈ ಗಾಗಲೇ ನಿಮಗೆ ಇರುವ ಆರೋಗ್ಯದ ಸ್ಥಿತಿಯಲ್ಲಿ ನತ್ಯನಾರಯಣನ ಪೂಜೆಮಾಡಿಕೊಂಡು ಮಾರ್ಕಂಡೇಯನ ಹಾಗೆ ಪೂಜೆ ಮಾಡಿಕೊಂಡು ಇರಬೇಕು. 42 ಲಕ್ಷ ರೂಪಾಯಿಗಳು ಹೋದರೆ ಮೈಸೂರು ಸರ್ಕಾರಕ್ಕೆ ನಷ್ಟವಾಗುತ್ತದೆ, ಎನ್ನುವುದನ್ನು ಬಿಟ್ಟುಬಿಡಿ. ನೀವು ಏತಕ್ಕೆ ಅದನ್ನು ತಲೆಯ ಮೇಲೆ ಹೊತ್ತುಕೊಂಡು ತಿರುಗಾಡುತ್ತಿರೋ ಗೊತ್ತಾಗುವುದಿಲ್ಲ. ನಿಮ್ಮ ಪಾರ್ಟಿಯವರು ಇದನ್ನು ದೊಡ್ಡದು ಮಾಡಿದ್ದಾರೆ. ಮೈಸೂರು ಸರ್ಕಾರದಲ್ಲಿ ಇದ್ದಂತ ಲೀಗಲ್ ಅಡ್ವೈಜರು ಎಷ್ಟು ಬುದ್ಧಿವಂತರು ಎನ್ನುವುದನ್ನು ನಿಮ್ಮ ಪಾರ್ಟಿಯವರು ಹೇಳಲು ಅವರ ಬಾಯಿಗೆ ಬೀಗ ಹಾಕಿರುವುದರಿಂದ ಅವರು ಏನೆನ್ನುತಾರೆ ಎನ್ನುವುದನ್ನು ನಾನು ನಿಮ್ಮ ಮುಂದೆ ಹೇಳುತ್ತಿದ್ದೇನೆ. ಗದಗ್-ಕೊಪ್ಪಳರೋಡಿನಲ್ಲಿ ಕೆಲಸ ಪ್ರಾರಂಭವಾಗಿದೆ ಎಂದು ಮಾನ್ಯಮಂತ್ರಿಗಳು ಹೇಳಿದರು. ಇಲ್ಲಿ ಬರಿಯ ಕಾಗದದ ಮೇಲೆಯೇ ಕೆಲಸ ನಡೆಯುತ್ತಿದೆಯೇ ಹೊರತು ಯಾವ ಕಾಮಗಾರಿಗಳನ್ನೂ ಪ್ರಾರಂಭ ಮಾಡಿಲ್ಲ. ಇದನ್ನು ಪ್ರಾರಂಭ ಮಾಡಿದರೂಕೂಡ ಸಾಕಷ್ಟು ಕೆಲಸಗಳನ್ನೊದಗಿನುವುದಕ್ಕೆ ಶಕ್ಯವಿರುವುದಿಲ್ಲ. ಗದಗ್, ಅಡ್ವಿ, ಸೋಮಲಾಪುರ, ಲಕ್ಕುಂಡಿ ಇಲ್ಲೆಲ್ಲಾ L.B. ರಸ್ತೆಗಳಿವೆ. ಇತ್ತು ಈ ರಸ್ತೆಗಳನ್ನು ಮಾಡಲು ಎಡಬಲದಲ್ಲಿ ಜಮೀನುಗಳನ್ನು ಅಕ್ವೈರು ಮಾಡಲು ಲ್ಯಾಂಡ್ ಅಕ್ವಿಸಿಷನ್ ಶಾಖೆಯವರು ಸರ್ವೆ ಮುಂತಾದ ಯಾವ ಕೆಲಸವನ್ನೂ ಮಾಡಿಲ್ಲ. Acquisition Proceedings ಇನ್ನೂ ಆಗದಿರುವುದರಿಂದ ಇಲ್ಲಿ ಕೂಲಿ ಜನಗಳನ್ನು ಪಯೋಗಿಸಿಕೊಳ್ಳಲು ಶಕ್ಯವಿರುವುದಿಲ್ಲ. ಲಕ್ಕುಂಡಿ-ಸಂಬಾಪುರ ಹತ್ತಿರ ಕೆಲಸ ಮಾಡಬೇಕಾದರೆ ಬಾಜುವಿನ ಜಾಗಾ ಸಿಕ್ಕಿರುವುದಿಲ್ಲ. ಕೆಲ ಕೆಲವು ಡಿಪಾರ್ಟುಮೆಂಟಿನವರು ಜಾಗ ದೊರಕಿಸುವ ಬಗ್ಗೆ ಮಾಡತಕ್ಕ ಕೆಲಸವಿದ್ದರೂಕೂಡ ಆ ಕೆಲವನ್ನು ಮಾಡಿರುವುದಿಲ್ಲ. Acquisition ಕೆಲಸವಾಗಿಲ್ಲ. ಈ ತರಹ ಕೆಲಸಗಳು ಸಾಗುತ್ತಿರುವುದರಿಂದ ಅಲ್ಲಿ scarcityಕೆಲಸಗಳನ್ನು ಆರಂಭ ಮಾಡಲಿಕ್ಕೆ ಸಾಧ್ಯವಾದೀತೆಂದು ನನಗನಿಸುವುದಿಲ್ಲ.

Sri H. M. CHANNABASAPPA.—Will the Hon'ble Member make a suggestion as to the work desired to be taken so that Government may consider taking it up?

ಶ್ರೀ ಸಿ. ಎಸ್. ಹುಲ್ಕೋಟಿ.—ನಮ್ಮ ಭಾಗಗಳಲ್ಲಿ ಕುಡಿಯುವ ನೀರಿನ ತೊಂದರೆ ಬಹಳವಿದೆ. ಆದುದರಿಂದ 'ಗದಗ್‌ತಾಲ್ಲೂಕಿನ ತಿಮ್ಮಾಪುರ ಮತ್ತು ಇದರ ಸುತ್ತಮುತ್ತಲಿನ ಭಾಗಗಳಲ್ಲಿ ಈಗ್ಗೆ ಎರಡುಮೂರು ವರ್ಷಗಳಿಂದಲೂ ದುಷ್ಕಾಲದ ಪರಿಣಾಮ ಹೆಚ್ಚಾಗುತ್ತ ನಡೆದುದರಿಂದ ಈ ಕಡೆಯಲ್ಲಿ ಕುಡಿಯುವ ನೀರಿನ ಕೆರೆಗಳು ಬೇಕಾಗಿವೆ. ಇಲ್ಲಿರುವ ಎಷ್ಟೋ ಕೆರೆಗಳಲ್ಲಿರುವ ಮಣ್ಣನ್ನು ತೆಗೆದು ಎರಡು ಮೂರು ವರುಷ ನೀರು ಸತತವಾಗಿ ಮಳೆಯಾಗನೆ ಇದ್ದರೂ ಕೂಡ ನಿಲ್ಲುವಂತೆ ಮಾಡಿದರೆ ಆ ಪ್ರದೇಶಗಳಿಗೆ ಅನುಕೂಲವಾಗುತ್ತದೆ. ಕುಡಿಯುವ ನೀರು ಸಿಕ್ಕಿದರೆ

ಇಲ್ಲಿನ ಜನರಿಗೆ ಉಪಯೋಗವಾಗುತ್ತದೆ. ಮತ್ತು ಇಲ್ಲಿನ ಕೂಲಿ ಜನರನ್ನು ಆ ಕೆಲಸಕ್ಕೆ ಉಪಯೋಗ ಮಾಡಲಿಕ್ಕೆ ಶಕ್ಯವಿದೆ.

ತಿಮ್ಮಾಪುರ ಮತ್ತು ಹರಲಾಪುರ, ಕನಗಿನ ಹಾಳದ ರಸ್ತೆ ಪ್ರಾರಂಭಿಸಿ ಪಾಲಾ—ಬಾದಾಮಿರಸ್ತೆಗೆ ಇವುಗಳನ್ನು ಕೂಡಿಸಿದರೆ ಸಾಕಷ್ಟು ಕೂಲಿ ಜನರನ್ನು ಉಪಯೋಗ ಮಾಡಿಕೊಳ್ಳಲು ಅವಕಾಶವಾಗುತ್ತದೆ ಮತ್ತು ಜನರಿಗೆ ಸಂಚಾರ ಮಾಡಲು ಮಾರ್ಗದ ಸೌಕರ್ಯದ ಸಲುವಾಗಿಯೂ ಉಪಯೋಗವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಇದೇ ಪ್ರಕಾರ ಲಿಂಗದಾಳ್—ಹೊಂಬಳ ಕಡೆಗೆ ಒಂದು ರಸ್ತೆ ಆಗುತ್ತದೆ. ಎಂದರೆ ಗದಗ್ ತಾಲ್ಲೂಕಿನ ಉತ್ತರಭಾಗಕ್ಕೆ ಇರುವ ಗ್ರಾಮಗಳ ಕೂಲಿಜನರಿಗೆ ಕೆಲಸ ದೊರೆಯುತ್ತದೆ. ಮುಂಡರಗಿಯಿಂದ ಕೊಪ್ಪಳದ ತಾಲ್ಲೂಕಿನ ಹಳ್ಳಿಗಳಿಗೆ ಹೋಗಲಿಕ್ಕೆ ಒಂದು ರಸ್ತೆ ಅವಶ್ಯವಿದೆ. ಇಲ್ಲಿ ಕೆಲಸ ಮಾಡಲು ಸಾಕಷ್ಟು ಕೂಲಿ ಜನರನ್ನು ಉಪಯೋಗಮಾಡುವುದಕ್ಕೆ ಶಕ್ಯವಾಗುತ್ತದೆಂದು ನಾನು ಹೇಳಬಯಸುತ್ತೇನೆ. ಆದರೆ ಈ ರಸ್ತೆಯ ಕೆಲಸವನ್ನು ಆರಂಭಮಾಡಿಲ್ಲ. ಹರ್ಲಾಪುರ ರಸ್ತೆ ಮತ್ತು ಇನ್ನಿತರ D.L.B. ರಸ್ತೆಗಳಿವೆ. ಈ ರಸ್ತೆಗಳನ್ನು ಕೂಡಿಸಬೇಕಾಗಿತ್ತು ಎಂದು ಬಹುದಿನಗಳಿಂದಲೂ ಹೇಳುತ್ತಿದ್ದೇವೆ. ಈ ಕಾರ್ಯಕ್ರಮವನ್ನು ತೆಗೆದುಕೊಂಡರೆ ಇದರಿಂದ ರಸ್ತೆಯೂ ಉಪಯೋಗವಾಗುತ್ತದೆ. ಈ ರೀತಿಯಾಗಿ ಎಷ್ಟೋ ಕೆಲಸಗಳನ್ನು ಈ ಭಾಗಗಳಲ್ಲಿ ಮಾಡಲು ಶಕ್ಯವಿದೆ ಎಂದು ನಾನು ಹೇಳಬಯಸುತ್ತೇನೆ.

ಅಧ್ಯಕ್ಷರು.—ಜನರಲ್ಲಾಗಿ ಹೇಳಿ. ಇವೆಲ್ಲಾ Details ಆದುವು.

ಶ್ರೀ ಸಿ. ಎಸ್. ಹುಲ್ಕೋಟಿ.—ಅಲ್ಲಿ ಇನ್ನು 3—4 ಕಾಮಗಾರಿಗಳನ್ನು ಸೂಚನೆ ಮಾಡಿದ್ದಾಗಿದೆ. ಆ ಸೂಚನೆ ಮಾಡಿದ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮುಂದರಗಿ ಹೇಕಾದಲ್ಲಿನ ಪರಿಸ್ಥಿತಿಯನ್ನು ಕುರಿತು ಹೇಳುವುದಾದರೆ ಅಲ್ಲಿ ದನಗಳಿಗೆ ಮೇವಿನ ಅಭಾವ ಬಹಳವಾಗಿದೆ. 4–5–6 ಮೈಲಿ ದೂರ ಹೋಗಿ ಹುಲ್ಲು ತೆಗೆದುಕೊಂಡುಬರುವುದು ಕಷ್ಟ. ಆದುದರಿಂದ ಅವು ಬದುಕುವಂತೆ ಏರ್ಪಾಡು ಮಾಡುವುದು ಅವಶ್ಯವಿದೆ. ಮೇವಿನ ವಿಷಯದಲ್ಲಿ ಕ್ರಮ ಕೈಗೊಂಡು ದನಕರುಗಳಿಗೆ ಉಪಯೋಗವಾಗುವಂತೆ ಮಾಡಬೇಕಾಗಿದೆ ಎಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಕೆಲ ಕೆಲವು ಕಡೆ ಫೇರ್‌ಪ್ರೈಜ್‌ಷಾಪ್ಸ್ ತೆಗೆದಿರುವುದಿಲ್ಲ. ಆದುದರಿಂದ ಫೇರ್‌ಪ್ರೈಜ್ ಷಾಪ್ಸ್ ತೆಗೆಯುವುದಕ್ಕೆ ಏರ್ಪಾಡು ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಮುಂದರಗಿಯಲ್ಲಿ ಮೈನರ್ ಇರ್ರಿಗೇಷನ್ ಸಲುವಾಗಿ ಸಾಕಷ್ಟು ಟ್ಯಾಂಕ್ಸ್ ಅನುಕೂಲ ಇದೆ. ಪ್ರತಿ ವರ್ಷ ದುಷ್ಕಾಲ ಬರುವುದರಿಂದ ಪ್ರತಿಯೊಂದು ರೀತಿಯಲ್ಲಿಯೂ ಅದನ್ನು ಖಾಯಂ ಆಗಿ ನಿವಾರಣೆ ಮಾಡುವುದು ಅವಶ್ಯಕ. ಎಂದರೆ ಮೈನರ್ ಇರ್ರಿಗೇಷನ್ ಸಲುವಾಗಿ ಟ್ಯಾಂಕುಗಳನ್ನು ಕಟ್ಟಲು ಸಾಕಷ್ಟು ಸ್ಕೋಪ್ ಇದೆ. ನಾರ್ಯಾರು ಕೆರೆಗಳನ್ನು ಸೂಚಿಸಿದ್ದೇನೆ. ಅವುಗಳ ಹೆಸರುಗಳನ್ನು ಮಂತ್ರಿಗಳ ಚೇಂಬರ್‌ನಲ್ಲಿ ಹೇಳಬಹುದು ಎಂದರೆ ಹೇಳಲು ತಯಾರಾಗಿದ್ದೇನೆ. ಖಾಯಂ ಪರಿಹಾರ ವ್ಯವಸ್ಥೆ ಮಾಡುವುದು ಅವಶ್ಯಕ ಎಂದು ಹೇಳಬಯಸುತ್ತೇನೆ. ಕೆಳಗಿನಿಂದ ಸೂಚನೆ ಬಂದಿಲ್ಲ. ಆ ರೀತಿ ಬಾರದ ಹೊರತು ಯಾವಕಾರ್ಯಕ್ರಮವನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳುವುದರಿಂದ ಜನಗಳಿಗೆ ತೊಂದರೆ ಆಗತೊಡಗಿದೆದೆ. ಈ ಬಗ್ಗೆ ತೀವ್ರ ಕಾರ್ಯಕ್ರಮವನ್ನೆ ತೆಗೆದುಕೊಳ್ಳಬೇಕು ಎಂದು ಹೇಳಬಯಸುತ್ತೇನೆ. ಸರ್ಕಾರದವರು ನಾನು ಹೇಳಿದ್ದನ್ನು ಪೂರೈಸಬೇಕೆಂದು ಕೇಳಿಕೊಳ್ಳುತ್ತೇನೆ.

†Sri KADIDAL MANJAPPA.—Mr. Speaker, Sir, the Hon'ble Member Sri Siddanthi who has tabled this motion and the other two Hon'ble Members, have tried to draw the attention of the Government to the need for taking up certain relief works in certain areas of the State. Unfortunately for us in this State, roughly one-third area of the State is either subject to scarcity conditions or subject to flood havoc every year. It is true that during this year some areas are affected by scarcity conditions. In reply to a question tabled by Sri Gadag I have given the necessary information regarding the amounts allotted and the works started in the areas affected by scarcity conditions. I need not repeat what has been mentioned in that statement.

ಶ್ರೀ ಪಿ. ಜಿ. ಸಿದ್ಧಾಂತಿ.—ತಾವು ಹೇಳಿರುವುದೆಲ್ಲ ಹೋದವರ್ಷಕ್ಕೆ ಸಂಬಂಧಪಟ್ಟದ್ದು. ಅವೆಲ್ಲಾ ಮುಗಿದುಹೋದುವು.

Sri KADIDAL MANJAPPA.—I do not agree with the Hon'ble Member Sri Siddanthi though I love to hear his speech in Kannada. I do not agree with him that there are famine conditions. Famine condition is a serious condition. Scarcity condition is a condition created on account of want of timely rains or want of adequate rains. So, a distinction has to be made between scarcity conditions and famine conditions. When there are famine conditions, the Government as well as the House should take a serious view of the whole matter. Nowhere in the State are there famine conditions at present.

Sri C. J. MUCKANNAPPA.—Will you kindly differentiate between famine condition and scarcity condition ?

Sri KADIDAL MANJAPPA.—That is what I want to distinguish just now. ಕನ್ನಡದಲ್ಲಿ ಹೇಳುವುದಾದರೆ, ಸ್ಕೇರ್‌ಸಿಟಿ ಕಂಡೀಷನ್ಸ್ ಎಂದರೆ, ಅಭಾವ ಪರಿಸ್ಥಿತಿ, ಫ್ಯಾಮಿನ್ ಕಂಡೀಷನ್ಸ್ ಎಂದರೆ ಬರಗಾಲ, ಅನ್ನದ ಅಭಾವ, ಬಚ್ಚೆಯ ಅಭಾವ, ಮತ್ತು ಎಲ್ಲಾ ವಸ್ತುಗಳ ಅಭಾವ ದುಷ್ಕಾಲ ಎಂದರೆ ಸರಿಯಾದ ಕಾಲವಲ್ಲ ಎಂದು ಅರ್ಥ.

(SRI KADIDAL MANJAPPA)

This problem of scarcity condition has to be studied with the other causes that are prevailing in the rural areas. In rural areas, there is already the problem of over-population. The land that was available for cultivation has remained constant. The extent of land which could be cultivated has remained constant for several centuries. To that extent, it is constant and it has not changed, whereas, the population has increased. Therefore, in addition to the scarcity conditions, the problem of over-population has complicated the situation.

Sri C. J. MUCKANNAPPA.—I want to know the density of population there per sq. mile.

Sri KADIDAL MANJAPPA.—I am not referring to any particular District or any particular taluk. I was submitting that in the rural areas there was unemployment among the people because of the over-population and because of the limit of agricultural land available. That problem is there in addition to the scarcity conditions prevailing there.

Sri B. L. NARAYANASWAMY (Mulbagal).—Is it only with regard to scarcity areas or is it all over the State?

Sri KADIDAL MANJAPPA.—In some of the Districts, there is need for absorbing population from the rest of the other Districts, and particularly in Mysore District, Shimoga District, Chickmagalur District, and Hassan District there is dearth of agricultural labour.

Similarly, in our big projects there is scope for absorbing many labourers. At present, in most of the projects like Sharavati Hydro Electric Project or the Bhadra Project or other big irrigation projects, the people who work there are either Tamilians or Andhras. It is unfortunate that our people, whether belonging to Bijapur District or Raichur are not in a mood to go and participate in the work that is available. They expect Government to start work in their village.

Sri R. M. PATIL (Navalgund).—If the Government starts taken up work in that area, would it solve the problem?

Sri KADIDAL MANJAPPA.—I will come to that. Government have liberally sanctioned small and big irrigation projects. My friend Sri Siddhanthi was referring to the British days. He spoke as though they were more comfortable when the British were ruling the country. I would request him to compare the number of works that were going on at the time when the British ruled the country, with the number of works taken up during the last ten years and even this year. I am not referring to the scarcity relief works as such. There are other works taken up by the Public Works Department, the Soil Conservation Department, the Local Boards and other Departments. Let us not confine our attention only to the works started by the Revenue Department as scarcity relief works, either a small inter communication road or inter-village road. My friend the Minister for Public Works will be able to give you a huge list of works that have been taken up in the several areas affected by scarcity conditions. He was pleased to inform the House of the number of works taken up in the Dharwar District itself. We have started a number of works. Unfortunately our people are not in a mood to move from their place of residence. In certain countries, where there is surplus population, they think of going out. We expect our people to go out of their villages to maks a living. I am prepard to absorb thousands of persons in my own District, in my own constituency. I assure the Hon'ble Members that it is quite possible to absorb more than 25,000 persons in irrigation projects.

Sri R. M. PATIL.—By asking the people to go to your District, do you think that their problems will be solved permanently? If the people of your District are asked to go somewhere and work, they would have the same feelings as are felt by others.

Sri KADIDAL MANJAPPA.—I am not asking the people of Bijapur and Dharwar Districts.

Sri S. D. KOTHAVALE (Chikodi).—It is a question of removing for all

time the scarcity and famine conditions. It is better to create conditions, say by way of irrigation works, as to put an end to all such things. You must start works in that area itself. I can understand we should have the spirit to go to some other place. The point is that steps should be taken to remove the famine conditions in those areas themselves.

Sri KADIDAL MANJAPPA.—I was about to refer to that question. I have already submitted that I have placed on the Table of the House a statement of the works taken up by the Revenue Department excluding the works started by the Public Works and other departments. I would like to repeat the figures relating to the allotment sanctioned during the year 1959-60 for the execution of scarcity relief works. These figures exclude the amount sanctioned for Taccavi, land improvement and other loans. For Belgaum Division, Government have allotted during this year Rs. 22 lakhs. During the year 1959-60, for Bijapur District nearly Rs. 9 lakhs have been allotted; for Gulbarga Rs. 2,25,000; For Bangalore Division Rs. 1,07,000; for Mysore Division about Rs. 50,000. I am prepared to read the statement of works that have been started by the revenue agency and the local board agency. It may take some time. Let not the Hon'ble Members create an impression.

Sri R. M. PATIL.—May I remind him? The point is this. The rainy season lasts till the end of October. There was no occasion to declare any area as a scarcity area unless the area that was affected last year was a scarcity area. So under such circumstances so far as Dharwar District is concerned, I may point out that some villages of Navalgund and the entire area of Nargund were affected. However, it may be stated that the Minister's figure is in respect of the last year's expenditure rather than this year's.

Sri KADIDAL MANJAPPA.—My friend Sri R. M. Patil was anxious about Nargund and Navalgund. I do not know whether he has gone through the list of works pertaining to Dharwar District. I am prepared to give him the list.

Sri R. M. PATIL.—I know it.

Sri KADIDAL MANJAPPA.—I presume that the Hon'ble Member is satisfied at least to some extent.

Sri B. L. NARAYANASWAMY.—The question does not relate to what they did or what they would do in future to provide relief temporarily. The question is, what they would do to prevent such scarcity in the area on a permanent basis. That has been the question before the Government for consideration for the past several years.

Mr. SPEAKER.—It is not only a question of preventing the scarcity conditions, but also a question of improving the present situation.

Sri B. L. NARAYANASWAMY.—When rains fail, what is the way out is the question.

Sri KADIDAL MANJAPPA.—Government have started the permanent measures since the time when the First Five Year Plan started. We have taken a number of big irrigation projects.

5 P.M.

ಶ್ರೀ ಎಂ. ಎಂ. ಪಾಟೀಲ್ (ಹಡಗಲಿ).—ನಾನೀಗ ಒಂದು ವಿಚಾರವನ್ನು ಮಾನ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಮೊನ್ನೆ ತಾನೆ ಮಾನ್ಯಮಂತ್ರಿಗಳು ಪ್ರಶ್ನೋತ್ತರಗಳ ಕಾಲದಲ್ಲಿ ಇದೇ ಮಾನ್ಯಸಭೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಕೆಲಪು ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಹಡಗಲಿ ತಾಲ್ಲೂಕಿನಲ್ಲಿ ಯಾವ ಕೆಲಸವನ್ನೂ ಕೈಗೊಂಡಿಲ್ಲ; ಇದಕ್ಕೆ ಕಾರಣವೇನು?

†Sri H. M. CHANNABASAPPA (Minister for Public Works and Electricity).—There appears to be a wrong impression that the Government of Mysore have not been aiming at permanent measures to relieve famine conditions in Bijapur, Raichur and Dharwar and other places. On many occasions, *i. e.*, during question hour and otherwise we have been discssing big projects like Upper Krishna project and Ghataprabha project for Bijapur. Left Bank Canal work is going on in full swing. Hidakal dam construction is going on in full swing. If it is the opinion of the Hon'ble Members that the tempo of works should be increased in order to create employment potential, Government will be too glad to do it in regard

(SRI H. M. CHANNABASAPPA)

to the Ghataprabha Left Bank Canal and Hidakal dam construction. So that we may provide employment to those who are seeking it but also effect permanent relief measures for Bijapur District. That is No. 1. No. 2 is, my friend was asking: 'what have you provided for Hadagali? Only very recently I have ordered that Hagaribommanahalli project work may be taken up immediately. The work has been commenced and it is going on. If it is the opinion of the Hon'ble Members that the tempo must still be increased, we have certainly no objection.

ಶ್ರೀ ಎಂ. ಎಂ. ಪಾಟೀಲ್.—ಹಗರಿಬೊಮ್ಮನಹಳ್ಳಿ ವಿಚಾರವನ್ನು ಮಾನ್ಯ ಮಂತ್ರಿಗಳೇನೋ ಹೇಳುತ್ತಿದ್ದಾರೆ. ಆದರೆ ಈ ಹೊತ್ತಿನವರೆಗೂ ಅಲ್ಲಿ ಏನೂ ಕೆಲಸಕಾರ್ಯಗಳೇ ಪ್ರಾರಂಭವಾಗಿಲ್ಲವಲ್ಲವೇ ?

Sri H. M. CHANNABASAPPA.—I am sorry. The work is going on. If it is the opinion of the Hon'ble Member that the tempo must be increased we have certainly no objection.

Sri KADIDAL MANJAPPA.—To continue my speech, Sir, I would like to submit that the Hon'ble Member Sri M. M. Patil need not be very bitter about this matter. He was telling me that Hagaribommanahalli project had ot been taken up. I have consulted my friend the Minister for Public Works. The earth work has commenced. Sri M. M. Patil now says that some other work is not taken up. There is a limit to the resources of the State. All the works cannot be taken up at the same time.

*Sri C. J. MUCKANNAPPA (Gubbi).—Make hay while the sun shines.

Sri KADIDAL MANJAPPA.—I must remind the Hon'ble Member Sri Patil that I was responsible when I was P.W. Minister to have it included in the Second Five Year Plan. When that is so how can he say that Government has not done this or that? I do not like that spirit.

ಶ್ರೀ ಎಂ. ಎಂ. ಪಾಟೀಲ್.—ಅಲ್ಲಿ ಕ್ಷಾಮಪೀಡಿತ ಪ್ರದೇಶವೆಂದಾಗಿದ್ದರೂ ಕೆಲಸಗಳನ್ನು ಪ್ರಾರಂಭಿಸಲು ಸರಕಾರದವರು ಹಿಂದುಮುಂದು ನೋಡುತ್ತಿದ್ದಾರೆ. ಜನರಿಗೆ ತುಂಬಾ ತೊಂದರೆಯಾಗಿದೆ. ಅದಕ್ಕಾಗಿ ಸರ್ಕಾರದವರು ಆ ಪ್ರದೇಶದಲ್ಲಿ ಯಾವುದಾದರೂ ಕಾಂಗಾರಿಗಳನ್ನು ತಕ್ಷಣ ಕೈಗೊಳ್ಳಬೇಕೆಂದು ಕೇಳುತ್ತಿದ್ದೇನೆ.

Sri H. M. CHANNABASAPPA.—High level work has commenced.

ಶ್ರೀ ಎಂ. ಎಂ. ಪಾಟೀಲ್.—ಆದು ಬಳ್ಳಾರಿ ತಾಲ್ಲೂಕಿಗಾಯಿತು. ಹಡಗಲಿ ತಾಲ್ಲೂಕೂ ಸಹ ಅಭಾವಕ್ಕೊಳಗಾದ ಪ್ರದೇಶ. ಅಲ್ಲಿ ಯಾವುದಾದರೂ ಕಾಂಗಾರಿಗಳನ್ನು ಕೈಗೊಳ್ಳಲಿಲ್ಲವೇಕೆ ಎಂದು ಕೇಳುತ್ತಿದ್ದೇನೆ.

†Sri KADIDAL MANJAPPA.—I am sorry, I must add a few words. So far as Hadagali is concerned that is a taluka which will be benefited on account of the Hagaribommanahalli Project. The channel goes tl rough Hadagali Taluka also. I had discussions with the Deputy Commissioner. He tells me that the time is not opportune for starting other relief works on the ground that people are engaged in the harvest. We have prepared a number of estimates; they are ready He also tells me that he is watching the situation. My friend Sri Patil tells me differently. If the House is of opinion that the Minister should see that the works are taken up in spite of the report of the Deputy Commissioner and if a rule is made to that effect, there is no need for a Minister or a Deputy Commissioner. Some clerks can be appointed and Hon'ble Members can write to them and they will order.

Sri C. J. MUCKANNAPPA.—I take exception to the statement made by the Hon'ble Minister. He is responsible to this House. Members are there to tell him this or that. Officers are there to carry out their duties. He says clerks can do the job and there is no need for either a Minister or a D.C. for the District. He has lost his temper. I am sorry for the attitude of my friend.

Sri KADIDAL MANJAPPA.—I keep my head very cool unlike my friend who frequently gets up like a Sputnik.

Sri J. B. MALLARADHYA (Nanjangud).—Lunik is the latest.

Sri S. D. KOTHAVALE.—The Hon'ble Minister was referring to famine relief measures and amelioration funds. In some other States like Bombay there is a famine relief fund to the extent of two crores. Is it not desirable to have

some such fund so that relief works can be taken up easily?

Sri KADIDAL MANJAPPA.—We intend enacting a law for creating a fund. At present there is no law for creating such a fund. In spite of there being no law, there is a fund called famine relief fund. The Thungabhadra project was taken up to prevent scarcity conditions in that area. The Bhdara project was taken up as a permanent measure to give relief to the people frequently affected by scarcity conditions. Even other projects were taken up with a view to provide irrigation facilities for the people who are not benefited by adequate rains frequently.

ಶ್ರೀ ಎಸ್. ವೈ. ಪಾಟೀಲ್ (ಸಿಂದ್ಗಿ).—ಮಾನ್ಯ ಮಂತ್ರಿಗಳು ನಮ್ಮ ಒಂದು ಪ್ರಶ್ನೆಗೆ ಉತ್ತರ ಕೊಡ ಬೇಕಾಗಿದೆ. ಬಿಜಾಪುರ ಜಿಲ್ಲೆಯಲ್ಲಿ N. E. S. ನಲ್ಲಿ ಬಾವಿಗಳಿಗೆ ಹಣ ಸಿಕ್ಕುತ್ತಿಲ್ಲ. ನೀರಾವರಿ ಬೆಳೆಗೆ ಬಹಳ ತೊಂದರೆಯಾಗಿ ಅಲ್ಲಿ ದುಷ್ಕಾಲಬಂದಿದೆ. ಪರಿಸ್ಥಿತಿ ಸರಿಯಾಗಿಲ್ಲ, ಆ ಪ್ರದೇಶದಲ್ಲಿ ಇರಿಗೇಷನ್ ಸೌಲಭ್ಯಗಳನ್ನು ಸರ್ಕಾರದವರು ಒದಗಿಸಿಕೊಡ ಬೇಕೆಂದು ವಿನಂತಿ ಇದೆ.

Sri M. RAMAPPA (Harihar).—Is it not violating the ruling you have given?

ಅಧ್ಯಕ್ಷರು.—ಶ್ರೀ ಶಂಕರಗೌಡರು ಮಾತನಾಡು ವುದೇ ಅಪರೂಪ. ಹಾಗಿರುವಾಗ ತಾವು ಅವರ ಬಗ್ಗೆ ಏಕೆ ಆಕ್ಷೇಪಣೆ ತೆಗೆದುಕೊಳ್ಳುತ್ತೀರಿ?

Sri G. VENKATAI GOWDA (Palaiyam).—He has not obtained previous permission.

Sri KADIDAL MANJAPPA.—So far as Sindagi Taluka is concerned, I must state that it has received the maximum grant under the scheme for sinking irrigation wells. I think in his taluka more than one thousand wells have been sunk.

Sri G. VENKATAI GOWDA.—You have made a discrimination.

Sri KADIDAL MANJAPPA.—The people co-operated with the officers and therefore it was possible to sink a good number of irrigation wells in that taluk.

It all depends upon local co-operation. After all, the subsidy we are paying is only Rs. 250.

Apart from the big irrigation projects, smaller irrigation projects are being taken up with a view to providing relief against scarcity conditions. A large number of minor irrigation works are under execution at present. In addition to this, Government have got a programme of giving subsidy and loan for sinking irrigation wells. No doubt that programme will be successful only when we are in a position to supply electricity freely and liberally, and that can be done only after the Sharavati Valley Project is completed. In addition to this, there is a new road programme. this year we propose to spend 35 lakhs of rupees, under rural communications. A number of road works have been taken up. The Deputy Commissioners have been asked to send up proposals. In some cases they have submitted proposals. For instance in Raichur District, road works are in progress. Either we must be in a position to take up irrigation projects or we must be in a position to take up smaller irrigation pojects. If there is no scope for either, the only thing we could do is to provide help to the agriculturists in sinking irrigation wells.

ಶ್ರೀ ಬಿ. ಕೆ. ನಾಗೂರ್ (ಬಿಜಾಪುರ).—ಒಂದು ವಿನಂತಿ: ಮಂತ್ರಿಗಳು ಒಂದೆರಡು ನಿಮಿಷ ಕುಳಿತುಕೊಂಡರೆ ಅದನ್ನು ಹೇಳುತ್ತೇನೆ. ಏಕೆಂದರೆ ತಾವು ಹೇಳಿದ್ದರ ಬಗ್ಗೆ ನಾನು ಈಗ ಕ್ಲಾರಿಫಿಕೇಟ್ ಮಾಡುತ್ತೇನೆ. ಈಗ ದೇಶದಲ್ಲಿ ಫ್ಯಾಮಿನ್ ಇದೆ. ಶ್ರೀಮಾನ್ ಚನ್ನಬಸಪ್ಪನವರು ಪ್ರಶ್ನೋತ್ತರ ಕಾಲ ದಲ್ಲಿ ಅಲ್ಲಿ ಹಾಗೆ ಮಾಡಿದೆ, ಇಲ್ಲಿ ಹೀಗೆ ಮಾಡಿದೆ, ಯಾವ ಪ್ರಶ್ನೆಗೂ ಅವಕಾಶವಿಲ್ಲವೆಂದು ಒಂದೇ ಉಸುರಿನಲ್ಲಿ ಹೇಳಿ ಮುಗಿಸಿಬಿಡುತ್ತಾರೆ.

Sri KADIDAL MANJAPPA.—I understand the anxiety of members when they say that we should take up permanent measures. I can also understand the anxiety of members who say that we should take up as far as possible works to meet the situation. But I must humbly submit—I do not say that the Hon'ble Members are exaggerating—that some people in their villages, in their anxiety to get more roads, more road-works, exaggerate conditions. I have been a Minister for Famine Relief for the last 7 years. I know how people in some places exaggerate and speak of scarcity conditions and try to prevail upon Ministers and Legislators to take up works. I do not fully agree with them.

Sri R. M. PATIL.—Has the Minister found any exaggeration in what the Speaker of the House has said?

Sri KADIDAL MANJAPPA.—No exaggeration. That is why I have explained the correct position in the House.

ಶ್ರೀ ಎಂ. ಕೆ. ನುರ್‌ಪುರ್.—ದೇಶದ ಜನರಿಗೆ ಎಲ್ಲೆಲ್ಲಿ ಕ್ಷಾಮ ತಲೆದೋರಿದೆ ಎಂಬುದು ಚೆನ್ನಾಗಿ ಗೊತ್ತಾಗುವಂತೆ ಹೇಳಬೇಕೆಂದು ನಾನು ಈಗ ಒಂದು ರಿಕ್ವೆಸ್ಟ್ ಮಾಡುತ್ತೇನೆ.

Sri KADIDAL MANJAPPA.—In an answer to a question I have givena reply in which the areas affected by scarcity conditions have been mentioned. If the Hon'ble Member so desires I can read the answers, but I think there is no need for it now. In addition to the amounts allotted for scarcity relief, the other departmental works have been taken. The policy of the Government is to spend in the first instance, as far as possible, the amount provided in the budget for execution in connection with the works included in the Five-year plan. If that amount is exhausted.....

Sri R. M. PATIL.—The Hon'ble Minister should know that we cannot predict that famine would occur in this or that area.

Sri KADIDAL MANJAPPA.—If there is no work included in the programme pertaining to any taluk or village, Government is prepared to take up certain relief works, but in the first instance we have instructed our officers to exhaust the resources provided in the budget and thereafter to spend the money out of the funds provided for famine relief. Government is watching the situation. They have taken all the steps necessary.

ಶ್ರೀ ಪಿ. ಜಿ. ಸಿದ್ಧಾಂತಿ.—ಮಂತ್ರಿಗಳು ಪ್ರವಾಸ ಹೋದಾಗ್ಗೆ ಯಾವುದು ಫ್ಯಾಮಿನ್ ಏರಿಯಾ, ಯಾವುದು ಫ್ಯಾಮಿನ್ ಏರಿಯಾ ಅಲ್ಲವೆಂಬುದನ್ನು ಸ್ಪಷ್ಟ ವಾಚ್‌ಮಾಡಬೇಕಾಗಿತ್ತೆಂದು ನಾನು ಹೇಳುತ್ತೇನೆ.

Sri KADIDAL MANJAPPA.—I have said that all the necessary steps have been taken by the Government.

ಶ್ರೀ ಪಿ. ಜಿ. ಸಿದ್ಧಾಂತಿ.—ಅದಕ್ಕಾಗಿ ತಾವು ಏನು ಸೂಚನೆಗಳನ್ನು ಕೊಟ್ಟಿದ್ದೀರಿ ಎಂಬುದನ್ನು ಹೇಳಬೇಕು.

Sri KADIDAL MANJAPPA.—We have provided money. I have read out the figures just now. In addition to this money, I have already submitted, there are funds available out of the budget allotment in other departments. We have done all that could be done in the circumstances.

Sri R. M. PATIL.—There are no funds available at the disposal of the Divisional Commissioner, Belgaum.

Sri KADIDAL MANJAPPA.—Sufficient funds are made available. There are sufficient works going on. Government would not hesitate to spend more money if there be need. Therefore Hon'ble Members, particularly my friend Sri Sidhanthi, need not have any anxiety. Government will take all possible steps to give relief to the people.

ಶ್ರೀ ಜಿ. ವೆಂಕಟೇಗೌಡ.—ತಾವು ಎಷ್ಟು ದುಡ್ಡು ಕೊಟ್ಟರೂ ಇಂತಹ ಕೆಲಸಮಾಡಲು ಜನರು ಸಿಕ್ಕುವುದಿಲ್ಲ. ಅನೇಕರು ಕೆಲಸಕ್ಕೇ ಬರುವುದಿಲ್ಲ. ಈಗ ಹಾರ್ವೆಸ್ಟ್ ಸೀಜನ್ ಎಂದು ಹೇಳಿಬಿಡುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಕೊಳ್ಳೇಗಾಲದಲ್ಲಿ ಕ್ಷಾಮ ಇಲ್ಲ.

ಶ್ರೀ ಜಿ. ವೆಂಕಟೇಗೌಡ.—ಕ್ಷಾಮ ಇದೆ, ಇಲ್ಲ ಎಂಬುದು ತಮಗೆ ಗೊತ್ತಿಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು.—ಈಗ ಕ್ಷಾಮ ಮಂಡ್ಯದಲ್ಲೂ ಇದೆ.

Sri C. J. MUCKANNAPPA.—He did not give us information as to how he is going to solve this problem permanently. Will the Government appoint a Committee to go into the details and find out ways and means of solving this problem of 'Kshama' permanently ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಕಮಿಟಿಮಾಡಿ ಎಂದು ಹೇಳುತ್ತಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ಏನು ಮಾಡಬೇಕು; ಎಂತೆಂತಹ ಪರಿಹಾರ ಕ್ರಮವನ್ನು ಕೈಕೊಳ್ಳಬೇಕೆನ್ನುವುದನ್ನು ಆಲೋಚನೆಮಾಡಿ ಅಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದು. ಧಾರವಾಡ ಜಿಲ್ಲೆಯ ನವಲುಗುಂದದಲ್ಲಿ ದುಷ್ಕಾಲದ ಪರಿಸ್ಥಿತಿ ಇದೆ ಎಂದು ಸದಸ್ಯರು ಹೇಳಿದರು. ಅದನ್ನು ತಡೆಗಟ್ಟಬೇಕಾದರೆ ಏನುಮಾಡಬೇಕು ಎನ್ನುವ Programme ಇದೆ. ಯಾವಯಾವುದನ್ನು ಮಾಡಬೇಕು ಎನ್ನುವುದನ್ನೆಲ್ಲ ಹಿಂದೆ ಇದ್ದಂತಹ ಬುದ್ಧಿವಂತರು, ನಾವೂ, ನೀವೂ ಯೋಚನೆಮಾಡಿ ಹೇಗಿರಬೇಕೆನ್ನುವುದನ್ನು ತೀರ್ಮಾನ ಮಾಡಲಾಗಿದೆ. ತಾವೇನು ಸಮಿತಿ ಮಾಡಬೇಕೆಂದು ಹೇಳುತ್ತೀರೋ ಬರಿಯ ಅಂತಹ ಸಮಿತಿಗಳನ್ನು ಮಾಡುವುದರಿಂದ ಯಾವ ತೀರ್ಮಾನಕ್ಕೂ ಬರುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಶಕ್ಯವಿದೆಯೋ, ಮಾನ್ಯಸದಸ್ಯರು ಕೊಟ್ಟ ಸಲಹೆಗಳಂತೆ ಅವನ್ನು ತೆಗೆದುಕೊಳ್ಳಲಾಗಿದೆ.

All that is necessary is to implement the programmes quickly. ಈ ಬಗ್ಗೆ ಶಕ್ತ ಯೀರಿ ಕಾರ್ಯಕ್ರಮಗಳನ್ನು implement ಮಾಡಲು ನರ್ವ ಪ್ರಯತ್ನ ಮಾಡುತ್ತಿದ್ದೇವೆ.

ಮುಖ್ಯವಾದ ರಸ್ತೆಗಳ ವಿಷಯವಾಗಿ ಹೇಳುವುದಾದಲ್ಲಿ ಚೀಫ್ ಇಂಜಿನಿಯರ್ ಅವರಿಗೆ 35 ಲಕ್ಷ ರೂಪಾಯಿಗಳನ್ನು ಈ ವರ್ಷಕ್ಕಾಗಿ ದೇಶದಲ್ಲಿ ಎಲ್ಲೆಲ್ಲ Missing Links ಇವೆ, C.D. ರಸ್ತೆ

ಗಳಿವೆ ಅಲ್ಲಿ ಕೆಲಸಮಾಡಿಸುವುದಕ್ಕಾಗಿ ಮತ್ತು ಇದನ್ನು ಜಿಲ್ಲಾವಾರಾಗಿ ಕೂಡ ಹಂಚಿದ್ದಾರೆ. ಮೇಲಾಗಿ ಬಿಜಾಪುರ, ಬೆಳಗಾಂ, ಧಾರವಾಡ ಈ ಕಡೆಗಳಲ್ಲಿ Missing links ಇವೆ. ಇವುಗಳಿಗೆ ಹೆಚ್ಚಿನ Priority ಕೊಟ್ಟು ಕೆಲಸ ಮಾಡಲಿಕ್ಕೆ ಸೂಚನೆಕೊಡಲಾಗಿದೆ. ಇದರ ಜೊತೆಗೆ, ಇನ್ನೂ ಒಂದು ಸೂಚನೆಯನ್ನು ಕೊಟ್ಟಿದ್ದೇವೆ, ಎಲ್ಲೆಲ್ಲಿ ದುಷ್ಕಾಲದ ಪರಿಸ್ಥಿತಿ ಇದೆಯೋ, missing links ಇರತಕ್ಕ ರಸ್ತೆಗಳಿಗಾಗಿ ಈಗ ಕೊಟ್ಟಿರತಕ್ಕ ಹಣ ಸಾಲದೇ ಇದ್ದರೂ ಚಿಂತೆಯಿಲ್ಲ. ಇನ್ನೂ ಎಷ್ಟು ಹೆಚ್ಚಾದರೂ ಅದನ್ನೂ ಕೂಡ ಕೊಡುತ್ತೇವೆ ಎಂದು ಇದಕ್ಕಿಂತ ಹೆಚ್ಚಾಗಿ ಹೇಗೆ ಸೂಚನೆ ಕೊಡುವುದಕ್ಕೆ ಸಾಧ್ಯ?

ಶ್ರೀ ಕೆ. ಕೆಂಚಪ್ಪ.—ಚಿತ್ರದುರ್ಗದಲ್ಲಿ ದುಷ್ಕಾಲ ಪರಿಸ್ಥಿತಿ ಇಲ್ಲ ಎಂದು ತಿಳಿದುಕೊಂಡಿದ್ದೀರಾ?

Sri R. M. PATIL.—Is it a fact that Government have issued instructions to give preference to water supply?

Sri H. M. CHANNABASAPPA.—I am speaking about road works.

Irrigation Works ಕೇಳುವಷ್ಟು ಸುಲಭವಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಎಲ್ಲಿ ನೀರಿದೆ, ಎಲ್ಲಿಲ್ಲ ಎನ್ನುವುದನ್ನು ಪರೀಕ್ಷೆ ಮಾಡಬೇಕಾಗುತ್ತದೆ. ರಸ್ತೆಗಳ ವಿಚಾರದಲ್ಲಿ ಯಾವ ಹಳ್ಳಿಗಳಲ್ಲಿ ಯಾವ ರಸ್ತೆ ಬೇಕು, ಬಿಜಾಪುರದಲ್ಲಾಗಲೀ, ಚಿತ್ರದುರ್ಗ ಲ್ಲಾಗಲೀ ಯಾವ ಜಿಲ್ಲೆಯ ಜನಗಳಿಗೆ ಕೆಲಸ ಕಾರ್ಯಗಳಿಗೆ ಅಭಾವವಿದೆ, ಅಂತಹ ಕಡೆಗಳ ಜನಗಳಿಗೆ ಕೆಲಸಗಳನ್ನು ಕೊಡುವುದಕ್ಕೆ ಕಷ್ಟವೇನಿಲ್ಲ. ಇಂತಹ ರಸ್ತೆಮಾಡಬೇಕಾದರೆ ಒಂದು ಸೂಚನೆ ಕೊಡಲಾಗಿದೆ. ಡೆಪ್ಯುಟೀ ಕಮಿಷನರನ್ನು ವಿಚಾರಮಾಡಿ, ಈ ಸಭೆಯ ಮಾನ್ಯ ಸದಸ್ಯರು ಎಲ್ಲಿ ಇಂತಹ ಪರಿಸ್ಥಿತಿ ಇದೆ ಎಂದು ತಿಳಿಸಿದರೆ ಅಂತಹ ಕಡೆಗಳಲ್ಲಿ ಕೇಲಸಗಳನ್ನು ಕೊಡತಕ್ಕ ವಿಷಯದಲ್ಲಿ ಸರಕಾರದ ಅಡ್ಡಿ ಏನೂ ಇಲ್ಲ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ಚಳ್ಳಕೆರೆ ತಾಲ್ಲೂಕಿನ ವಿಷಯವಾಗಿ ಹೇಳುತ್ತಾ ಕ್ಷಾಮ ಪ್ರದೇಶ ಎಂದು ಚಳ್ಳಕೆರೆ, ಚಿತ್ರದುರ್ಗ ಮತ್ತು ಹಿರಿಯೂರು ಈ ಮೂರು ತಾಲ್ಲೂಕುಗಳಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡರೂ 30-40 ಮೈಲಿಗಳ ದೂರದಲ್ಲಿ ತೆಗೆದುಕೊಳ್ಳುತ್ತೀರಿ; ಇದರಿಂದ ಕೂಲಿ ಜನಗಳಿಗೆ ಅಷ್ಟು ದೂರ ಹೋಗಲು ತೊಂದರೆಯಾಗುತ್ತದೆ. ಇದಕ್ಕಾಗಿ 5-10 ಮೈಲಿಯೊಳಗೆ ಇಂತಹ ಕೆಲಸಗಳನ್ನು ತೆಗೆದುಕೊಂಡು ಕೂಲಿಗಳನ್ನು ಕೆಲಸಮಾಡುವುದಕ್ಕೆ ತೆಗೆದುಕೊಳ್ಳುವುದು ಸೂಕ್ತವಾದುದು. ಹೀಗೆ 30-40 ಮೈಲಿಗಳ ದೂರ ಕೆಲಸಗಳನ್ನು ತೆಗೆದುಕೊಂಡರೆ ಬಹಳ ಕಷ್ಟವಾಗುತ್ತದೆ. ಚಿತ್ರದುರ್ಗ ಜಿಲ್ಲೆಯ ಈ ಮೂರು ತಾಲ್ಲೂಕುಗಳಲ್ಲಿ ಈ ರೀತಿಯಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲೆಲ್ಲಿ ಏನೇನು ಮಾಡಬೇಕು ಎನ್ನುವುದನ್ನು ಇಲ್ಲೇ ನಿರ್ಧಾರಮಾಡುವುದಕ್ಕಾಗುವುದಿಲ್ಲ. ತಾವು ಹೇಳತಕ್ಕ ರಸ್ತೆಗಳ ಕೆಲಸವನ್ನು ತೆಗೆದುಕೊಳ್ಳುವುದು ಅಗತ್ಯವೇ, ಅಲ್ಲವೇ ಎಂಬುದನ್ನು ನೋಡಬೇಕು.

Mr. SPEAKER.—The House will now rise for the day and meet again at 1 P.M. tomorrow.

The House adjourned at Thirty Minutes past Five of the Clock to meet again at One of the Clock on Wednesday, the 23rd December 1959.

WD 2029—GPB—900—26-6-1961